ಸಿದ್ಧಗಂಗಾ

ಅಕ್ಟೋಬರ್, 1976



'ಸಿದ್ಧಗಂಗಾ'

ಅಕ್ಟೋಬರ್, ೧೯೭೬

ಸಂಪುಟ–೧೨ ಸಂಚಿಕೆ–೧೦

ಮುಖ ಪುಟ
ಸತ್ಯ-ಅಹಿಂಸೆಯ ಅಸ್ತ್ರವ ಹಿಡಿದೆ।
ದಾಸ್ಯ ಶೃಂಖಲೆಯನು ನೀ ತೊಡೆದೆ॥

ಪ್ರಕಾಶಕರು
ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ
ಹೆಚ್. ಬಿ. ಗಂಗಾಧರಯ್ಯ

ಸಂಪಾದಕರು
ಪಂ॥ ಚನ್ನಪ್ಪ ಎರೇಸೀಮೆ
ಕೆ. ಜಿ. ರಂಗಯ್ಯ

ಜಾಹೀರಾತು ವ್ಯವಸ್ಥಾಪಕರು
ಎಂ. ರೇಣುಕಾರಾಧ್ಯ

ಹಂಚಿಕೆಯ ವ್ಯವಸ್ಥಾಪಕರು
ಎಸ್. ಗಂಗರುದ್ರಪ್ಪ

ಮುದ್ರಕರು
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ

ಪ್ರಕಟನೆಯ ಸ್ಥಳ
ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ
ವಾರ್ಷಿಕ ಚಂದಾ: 10 ರೂ
ಆಜೀವ ಸದಸ್ಯತ್ವ: 101 ರೂ

ಶ್ರೀವಾಣಿ



[illegible] ಸನಾಗದಿದ್ದರೆ ರ[illegible] ಒಂಣ ಕಾರ್ಯದಲ್ಲಿ ಅಗತ್ಯವಾಗಿರುವ ಸೃಷ್ಟ್ಯಾತ್ಮಕ ಶಕ್ತಿಯ ರಕ್ಷಣೆ ಕಷ್ಟವಾಗುತ್ತದೆ ಅಂತಹ ದಿವ್ಯ ಶಕ್ತಿ ಒಳ್ಳೆಯ ಆವರಣದ ಅಭಾವದಿಂದ ಮಳೆಯಿಲ್ಲದ ಬಂಜರು ನೆಲದಲ್ಲಿ ಬೀಜ ಬಿತ್ತಿದರೆ ಹೇಗೋ ಹಾಗಾಗುತ್ತದೆ. ದೇಶದ ಪ್ರಗತಿಯ ದೃಷ್ಟಿಯಿಂದ ಅಂತಹ ಸತ್ ಶಕ್ತಿಗಳ ರಕ್ಷಣೆ ಅತ್ಯಗತ್ಯ.

ದೇಶ ತನ್ನ ಸಾರ್ಥಕತೆಗೆ ತರುಣ ಜನಾಂಗದತ್ತ ಮುಖ ಮಾಡಿದೆ ಇಂದಿನ ತರುಣ ಜನಾಂಗ ಇದಕ್ಕೆ ಸಮಂಜಸವಾದ ಪ್ರತಿಕ್ರಿಯೆಯನ್ನು ತೋರಿ ಕೃತಾರ್ಥರಾಗಬೇಕಾಗಿದೆ. ದೇಶಕ್ಕೆ, ಧರ್ಮಕ್ಕೆ ಧಕ್ಕೆ ಬಂದಾಗ ಸರ್ವರೂ ಜಾಗೃತರಾಗಿ ತಮ್ಮ ತಮ್ಮ ಕರ್ತವ್ಯವನ್ನು ಮಾಡಬೇಕು.

ಜನರಲ್ಲಿ ಅನೀತಿ, ಅನ್ಯಾಯ ಹೆಚ್ಚಾದಾಗ ಜಗತ್ತಿನಲ್ಲಿ ಕ್ಷಾಮಡಾಮರಗಳು ತಲೆಹಾಕುತ್ತವೆ. ಜನರು ಕಷ್ಟಕಾರ್ಪಣ್ಯಗಳಿಗೆ ಗುರಿಯಾಗುತ್ತಾರೆ. ಈ ಶಿಕ್ಷೆಯಿಂದ ಮುಕ್ತರಾಗಬೇಕಾದರೆ ಭಕ್ತಿಯಿಂದ ಧ್ಯಾನಮಾಡುವುದೇ ಅಗಿದೆ.

ದೇಶದಲ್ಲಿ ಬಹಳ ಮಂದಿ ಕಷ್ಟ ಅನುಭವಿಸುತ್ತಿರುವಾಗ ಶ್ರೀಮಂತರು ಸ್ವಯಂಪ್ರೇರಿತರಾಗಿ ಮುಂದೆ ಬಂದು ದೀನ ದಲಿತರ ಸೇವೆಗಾಗಿ ನಿಲ್ಲುವುದು ಅವರ ಕರ್ತವ್ಯ, ತ್ಯಾಗ, ಸೇವೆ, ಎಂದಾಕ್ಷಣ ತಮ್ಮಲ್ಲಿರುವ ಎಲ್ಲವನ್ನೂ ಕೊಡಬೇಕೆಂದಲ್ಲ ತಾವು ಉಂಡು ಮಿಕ್ಕಿದ್ದನ್ನು ಇಲ್ಲದವರಿಗೆ ನೀಡಿದರೆ ಅದೇ ಅತ್ಯುತ್ತಮ ಸೇವೆ. ಸ್ವಾರ್ಥತ್ಯಾಗ ಪ್ರಥಮ ಕರ್ತವ್ಯ. ಅದು ಮುಂದಿನ ತ್ಯಾಗಕ್ಕೆ ನಾಂದಿಯಾಗುತ್ತದೆ. ಸಾಮಾನ್ಯ ಜನತೆಯ ಹೃದಯ ನೊಂದು ಬೆಂದು ಅದರ ಬಿಸಿ ಕ್ರಾಂತಿಕಿಡಿಗೆ ಎಡೆಮಾಡಿಕೊಡುವ ಮುನ್ನ ಉಳ್ಳವರು ಇಲ್ಲದವರಿಗೆ ನೀಡಿ ಎಲ್ಲರೂ ಸಹಬಾಳ್ವೆ ಮಾಡುವುದು ಇಂದಿನ ಅತಿ ಮುಖ್ಯ ಅವಶ್ಯಕತೆಗಳಲ್ಲಿ ಮೊದಲನೆಯದು. ಏಕೆಂದರೆ ಒಂದು ತುತ್ತು ಅನ್ನದ ಹಿಂದೆ ಸಾವಿರಾರು ಮಂದಿಯ ಶ್ರಮದ ಶಕ್ತಿ ಸಾಗರವಾಗಿ ನಿಂತಿದೆ. ಇದನ್ನು ಅರಿತಾಗಲೇ ಮನುಷ್ಯ ಮನುಷ್ಯನಾಗಲು ಸಾಧ್ಯ.

—

ಪರಿವಿಡಿ

ಸ್ಥಿರ ಶೀರ್ಷಿಕೆಗಳು:

ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಮಾಸ ಪತ್ರಿಕೆಯು ಲೇಖಕರಿಂದ ವಿಚಾರ ಪ್ರಚೋದಕವಾದ ಲೇಖನಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಧರ್ಮ, ಸಂಸ್ಕೃತಿ, ಸಾಮಾಜಿಕ, ಐತಿಹಾಸಿಕ ಹಾಗೂ ಸ್ಥಳ ಮಹಾತ್ಮೆಗಳಿಗೆ ಸಂಬಂಧಿಸಿದವುಗಳಾದರೆ ಹೆಚ್ಚು ಆದ್ಯತೆ ನೀಡಲಾಗುವುದು. ಪ್ರಚಲಿತ ಸಾಮಾಜಿಕ ಜೀವನದ ಸಮಸ್ಯೆಗಳನ್ನು ಬಿಂಬಿಸುವ ಹಾಗೂ ಅವುಗಳಿಗೆ ಪರಿಹಾರ ಸೂಚಿಸುವ ಸಣ್ಣಕಥೆ, ಕವನ ಮತ್ತು ಪ್ರಬಂಧಗಳಿಗೂ ಸ್ವಾಗತವುಂಟು. ಲೇಖನಗಳು ಫುಲ್‌ಸ್ಕೇಪ್ ಸೈಜಿನ 3 ಪುಟಗಳಿಗೆ ಮೀರದಂತಿರಬೇಕು. ಸ್ವೀಕೃತವಾದ ಲೇಖನಗಳಿಗೆ "ಸಿದ್ಧಗಂಗಾ" ಆಗಿಂದಾಗ್ಗೆ ನಿಗದಿ ಮಾಡಿಕೊಳ್ಳುವ ಸಂಭಾವನೆಯನ್ನು ನೀಡಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂತಿರುಗಿಸಲಾಗುವುದಿಲ್ಲ ಪ್ರಯುಕ್ತ ಹಸ್ತಪ್ರತಿಯ ನಕಲನ್ನು ಕಾದಿರಿಸಿಕೊಳ್ಳುವುದು ಸೂಕ್ತ. ಲೇಖನಗಳನ್ನು ಸ್ಫುಟವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆದು

"ಸಂಪಾದಕರು"
'ಸಿದ್ಧಗಂಗಾ' [ಕನ್ನಡ ಮಾಸಪತ್ರಿಕೆ]
ಶ್ರೀ ಸಿದ್ಧಗಂಗಾ ಕ್ಷೇತ್ರ -572131
ತುಮಕೂರು ಜಿಲ್ಲೆ

ಇವರಿಗೆ ಕಳುಹಿಸಿ ಕೊಡಬೇಕಾಗಿ ವಿನಂತಿ.

ಕನ್ನಡ ಸೂಕ್ತಿ ಸಂಹಿತೆ

ಅವಿವೇಕ ಫಲ

ಕೂಡಲೆ ಕಾರ್ಯವ ಮಾಡಲೆ ಬಾರದು
ಕಷ್ಟವನೊದಗಿಪುದವಿವೇಕ.

— ಅನ್ಮೆಂಬಳ ಶಂಕರ ನಾರಾಯಣ ನಾವಡ.

(ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಕನ್ನಡ ಸೂಕ್ತಿ ಸಂಹಿತೆಗಳ ಲೇಖಕರು.)

ಕೆಲಸದ ಸಮಯದಲ್ಲಿ ಪೂಜೆ

—ಈಶ್ವರಚಂದ್ರ

ಪ್ರಕೃತಿಯಿಂದ ತನಗಾಗುವ ಲಾಭಗಳಿಗೆ ಕೃತಜ್ಞತೆ ಸಲ್ಲಿಸುವ ವಿಧಾನವಾಗಿ ಮನುಷ್ಯನಿಂದ ಪೂಜೆ ಆರಂಭವಾಗಿರಬಹುದು. ಹಾಗೆಯೇ ಪ್ರಕೃತಿಯ ವಿಕೋಪಗಳಿಗೆ ಹೆದರಿ ಕಷ್ಟದಿಂದ ಪಾರಾಗಲೂ ಪೂಜೆ ರೂಢಿಯಾಗಿರಬಹುದು. ಜೀವ ನೀಡುವ ಗಾಳಿ, ಶಾಖ ಕೊಡುವ ಬೆಂಕಿ, ದಾಹ ತೀರಿಸುವ ನೀರಿನ ಬಗೆಗೆ ಆದಿ ಮಾನವನಿಗೆ ಕೃತಜ್ಞತೆ ಮೂಡಿ ಪೂಜೆ ಆರಂಭಿಸಿದ್ದರೆ ಆಶ್ಚರ್ಯವಿಲ್ಲ. ಗಾಳಿ ಬಿರುಗಾಳಿಯಾದಾಗ, ಬೆಂಕಿ ದಾವಾನಲವಾದಾಗ, ನೀರು ಪ್ರವಾಹವಾದಾಗ ಹೆದರಿಕೆ ಪೂಜೆಗೆ ಎಳಸಿರಬಹುದು. 'ಪರಮಾತ್ಮನೊಡನೆ ಜೀವಾತ್ಮನ ನಿವೇದನೆಯೇ ಪೂಜೆ' ಎಂಬ ಕಲ್ಪನೆ ಮೂಡಿದ್ದು ಮನುಷ್ಯನ ಬುದ್ಧಿ ಚಿಗುರಿದ ಮೇಲಿರಬೇಕು. ಬರುಬರುತ್ತಾ ಪೂಜೆ ಉನ್ನತಿಗೇರಿತು. ಈಗ ಒಂದು ಅಣುಕು ರೂಪದಲ್ಲಿ ಪೂಜೆ ಉಳಿದಿದೆ. ಈಗ ಪೂಜೆಯೊಂದು ಸ್ವಾರ್ಥದ ಬೇಡಿಕೆಗಳಿಗೆ ದೇವರಿಗೆ ಸಲ್ಲಿಸುವ ಮುಂಗಡ ಲಂಚ ಅಥವಾ ತೀರುವಳಿ ಸೇವೆಯಾಗಿದೆ; ಅಥವಾ ದೈನಂದಿನ ಅನಿವಾರ್ಯ ಕರ್ತವ್ಯಗಳಲ್ಲೊಂದಾಗಿ ಕೆಲವರಲ್ಲುಳಿದಿದೆ. ಇಂದಿಗೂ ಎಷ್ಟೋ ಜನ ತಮ್ಮ ಕೆಲಸ-ಕಾರ್ಯಗಳಿಗೆ ಹೊರಡುವ ಮುನ್ನ ಮನೆಯಲ್ಲಿ ಪೂಜೆ ಮಾಡುವುದುಂಟು. ಮನಸ್ಸಿನ ಶಾಂತಿ, ಸಾತ್ವಿಕ ಮನೋದಾರ್ಢ್ಯ, ನೈತಿಕ ಬಲ ಕೊಡಲು ಪೂಜೆ ಸಹಾಯಕವಾಗುತ್ತದೆ.

ಪೂಜೆಯನ್ನು ಕಾರ್ಯಕ್ಷೇತ್ರಕ್ಕೆ ವಿಸ್ತರಿಸಿ ಆಗುವ ಸಾಧಕ ಬಾಧಕ ಅಂಶಗಳು ವಿವೇಚನಾಯೋಗ್ಯ. ಕಾರ್ಖಾನೆಗಳಲ್ಲಿ, ಸರ್ಕಾರಿ/ಖಾಸಗಿ ಕಚೇರಿಗಳಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ ವಾರದ ಒಂದು ದಿನ ಪೂಜೆ ನಡೆಸುವುದು ಈಗ ವಾಡಿಕೆಯಾಗಿದೆ. ಹತ್ತು ಜನ ಸೇರಿ ಚಂದಾ ಹಾಕಿ ತಮಗೆ ಬೇಕಾದ ದೇವರ ಫೋಟೋಗಳನ್ನು ತರುತ್ತಾರೆ. ತಾವು ಕೆಲಸ ಮಾಡುವ ಕಟ್ಟಡದಲ್ಲಿ ಎಲ್ಲರಿಗೂ ಕಾಣುವ ಒಂದು ಅನುಕೂಲ ಸ್ಥಳದಲ್ಲಿ ಅವನ್ನು ಸ್ಥಾಪಿಸುತ್ತಾರೆ. ಬಣ್ಣದ ವಿದ್ಯುತ್ ದೀಪ ಬೆಳಗಿಸುತ್ತಾರೆ ವಾರಕ್ಕೊಂದು ದಿನ-ಶನಿವಾರವೋ, ಶುಕ್ರವಾರವೋ ಪೂಜೆ ಮಾಡುತ್ತಾರೆ. ಚರುಪು ಹಂಚುತ್ತಾರೆ ಈ ಪೂಜಾವಿಧಿಯಲ್ಲಿ ಶಾಖಾ ಮುಖ್ಯಸ್ಥರಿಂದ ಹಿಡಿದು ಎಲ್ಲರೂ ಭಾಗವಹಿಸುತ್ತಾರೆ. ಕೆಲಸಗಾರರ ಪೈಕಿ ಯಾರಿಗಾದರೂ ಬಡ್ತಿ ಬಂದರೆ, ಮದುವೆಯಾದರೆ, ಮಕ್ಕಳಾದರೆ ಈ ಆಫೀಸ್/ಕಾರ್ಖಾನೆ ದೇವರಿಗೆ ಪೂಜೆ ಮಾಡಿಸಿ ಪ್ರಸಾದ ರೂಪದಲ್ಲಿ ಸಿಹಿ ಹಂಚುತ್ತಾರೆ.

ಇದರಿಂದ ಯಾರಿಗೇನು ಅಡ್ಡಿ? ಪೂಜೆ, ಜನರಲ್ಲಿ ಭಕ್ತಿಭಾವ ಮೂಡಿಸುತ್ತೆ; ಭಾವೈಕ್ಯ ರೂಪಿಸುತ್ತೆ; ದಿನದ ಕೆಲಸದ ಆರಂಭಕ್ಕೊಂದು ಒಳ್ಳೆಯ ಮುನ್ನುಡಿ ಹಾಕಿ ಕೊಡುತ್ತೆ–ಎಂದು ಪೂಜಾಪ್ರಿಯರು ವಾದಿಸುತ್ತಾರೆ. ಇವರ ಮಾತನ್ನು ಅಲ್ಲಗಳೆಯುವಂತಿಲ್ಲ. ಆದರೆ ಈ ಪೂಜೆಯ ನೆಪದಲ್ಲಿ ಎಷ್ಟೊಂದು ಸಮಯ ವ್ಯರ್ಥವಾಗುತ್ತದೆ ಎಂಬ ಕಲ್ಪನೆ ಅವರಿಗಿದ್ದಂತಿಲ್ಲ. ಒಂದು ಉದಾಹರಣೆಯೊಡನೆ ಇದನ್ನು ಮನದಟ್ಟು ಮಾಡಿಕೊಡಬಹುದು. ಸುಮಾರು ಇಪ್ಪತ್ತು ಸಾವಿರ ಜನ ಕೆಲಸ ಮಾಡುವ ಒಂದು ದೊಡ್ಡ ಕಾರ್ಖಾನೆಯಲ್ಲಿ ಅರ್ಧದಷ್ಟು ಜನ ಈ ಪೂಜೆಯಲ್ಲಿ ಭಾಗವಹಿಸುತ್ತಾರೆಂದಿಟ್ಟುಕೊಳ್ಳೋಣ. ವಾರಕ್ಕೊಂದು ದಿನ ಪೂಜೆ. ಪೂಜೆಯ ಅವಧಿ ಹದಿನೈದು ನಿಮಿಷಗಳು. ಎಂದರೆ

ಒಂದು ವಾರದಲ್ಲಿ ಸುಮಾರು 2500 ಮಾನವ ಗಂಟೆಗಳು ವ್ಯರ್ಥವಾಗುತ್ತವೆ. ಇದನ್ನೇ 312 ಮಾನವ ದಿನ (ಒಬ್ಬ ಮನುಷ್ಯ ಒಂದು ದಿನಕ್ಕೆ ಎಂಟು ಗಂಟೆ ಕೆಲಸ ಮಾಡುತ್ತಾನೆ ಎಂಬ ಆಧಾರದ ಮೇಲೆ) ಎಂದು ಹೇಳಬಹುದು. ವರ್ಷಕ್ಕೆ ಇಂಥ ಐವತ್ತೆ[illegible] ವಾರಗಳು. ಎಂದರೆ ಆ ಕಾರ್ಖಾನೆಯಲ್ಲಿ ವರ್ಷ 16,250 ಮಾನವ ದಿನಗಳು ಈ ಪೂಜೆಯ ನೆಪ[illegible] ವ್ಯರ್ಥವಾಗುತ್ತಿವೆ. ಇಡೀ ರಾಷ್ಟ್ರದ ದೃಷ್ಟಿಯಿ[illegible] ಲೆಕ್ಕ ಹಾಕಿದಾಗ, ಆಗುವ ಕಾಲ ವ್ಯರ್ಥ ಊಹಾತೀತ. ಕಾಲದ ಜೊತೆಗೆ, ಕಾರ್ಖಾನೆಯ ವಸ್ತುಗಳನ್ನೇ ಬಳಸಿ ಫೋಟೋಗಳನ್ನು ಗೋಡೆಗೆ ಹಾಕಲು ಪೀಠ, ಮಂಟಪ ಮೊದಲಾದುವನ್ನು ಮಾಡಲು ಆಗುವ ಸಾಮಗ್ರಿಗಳು, ಉರಿಸುವ ದೀಪಗಳಿಂದಾಗುವ ನಷ್ಟವನ್ನು ಲೆಕ್ಕ ಹಾಕಿದರೆ ಆಶ್ಚರ್ಯವಾಗುತ್ತದೆ. ಮೇಲೆ ಹೇಳಿದ ಉದಾಹರಣೆಯಲ್ಲಿ ಕಾರ್ಖಾನೆಯಾದ್ಯಂತ ದೇವರ ಪಟಗಳ ಮುಂದೆ ಉರಿಯುವ ದೀಪಗಳನ್ನು ಬಳಸಿ ಒಂದು ಹಳ್ಳಿಗೆ ವಿದ್ಯುತ್ ಬೆಳಕಿನ ಸೌಕರ್ಯ ಒದಗಿಸಬಹುದು. (ಸುಮಾರು 500 ದೀಪಗಳು)

ವಾರಕ್ಕೊಂದು ದಿನ ಪೂಜೆ ಮಾಡುವುದಷ್ಟೇ ಅಲ್ಲ. ಶಿವರಾತ್ರಿ, ರಾಮನವಮಿಗಳೂ ಕೆಲಸ ಮಾಡುವ ಸ್ಥಳದಲ್ಲಿ ವಿಜೃಂಭಣೆಯಿಂದ ನಡೆಯುತ್ತವೆ. ಆಯುಧ ಪೂಜೆಯ ವಿಷಯವನ್ನಂತೂ ಹೇಳುವುದೇ ಬೇಡ.

ಜಾತ್ಯತೀತತೆಗೆ ಹೆಸರಾದ ನಮ್ಮ ರಾಷ್ಟ್ರದಲ್ಲಿ ಕಾರ್ಖಾನೆ, ಕಚೇರಿಗಳಲ್ಲಿ ಕೆಲಸ ಮಾಡುವ ಮುಸಲ್ಮಾನರಿಗೆ ಪ್ರತಿ ಶುಕ್ರವಾರ ಮಧ್ಯಾಹ್ನ ನಮಾಜಿಗೆಂದು ಒಂದು ಗಂಟೆ ವಿಶೇಷ ಬಿಡುವು ಕೊಡುವುದೂ ಉಂಟು. ಕ್ರಿಶ್ಚಿಯನ್ನರು ಪ್ರಾರ್ಥನೆಗೆ ಸಮಯ ಕೇಳಬಹುದು, ಹಿಂದೂಗಳು ತ್ರಿಕಾಲ ಸಂಧ್ಯಾವಂದನೆ, ಪೂಜೆ, ಭಜನೆ, ಏಕಾದಶಿ, ಹುಣ್ಣಿಮೆ, ಅಮಾವಾಸ್ಯೆಗಳಿಗೆ ಬಿಡುವು ಕೇಳಬಹುದು. ಮತ್ತೊಬ್ಬರು ಮತ್ತೊಂದಕ್ಕೆ! ಹೀಗೆ ಎಲ್ಲರಿಗ[illegible]ವು ನೀಡುತ್ತಾ ಹೋದರೆ ಕೆಲಸ ಮಾಡುವ[illegible]ಹಾರ

'ಕಾಯಕವೇ ಕೈಲಾಸ' ಎಂದು ಬಸವಣ್ಣನವರು ಹೇಳಿದಾಗ ಕೆಲಸದ ಮಹತ್ವ ಸಾರಿದರು. Work is worship ಎಂಬ ಇಂಗ್ಲಿಷ್ ಉಕ್ತಿ ಕೆಲಸದ ಮಹತ್ವವನ್ನು ಸ್ಪಷ್ಟವಾಗಿ ಸಾರುತ್ತದೆ. 'ಆಟದ ಸಮಯದಲ್ಲಿ ಆಟ; ಪಾಠದ ಸಮಯದಲ್ಲಿ ಪಾಠ' ಎನ್ನುವ ಹಾಗೆ ನಾವು ಕೆಲಸಕ್ಕೆ ಬಂದಾಗ ಕೆಲಸ ಮಾಡೋಣ. ನಮ್ಮ ಜಾತಿ ಮತ ಮೊದಲಾದವನ್ನೆಲ್ಲ ಮನೆಯ ನಾಲ್ಕು ಗೋಡೆಯೊಳಗೇ ಕಳಚಿಟ್ಟು ರಸ್ತೆಗಿಳಿದಾಗ ಶುದ್ಧ ಮಾನವರಾಗೋಣ.

ಡಾಕ್ಟರ್ ಕೋಪರ್‌ನಿಕಸ್

—ಎಚ್. ಎನ್. ರಂಗರಾವ್

ಈ ಖಗೋಳ ಶಾಸ್ತ್ರಜ್ಞ, ವೇದಾಂತಿ, ವೈದ್ಯ, [illegible]ನಿಯರ್, ಜ್ಯೋತಿಷಿ, ವಿಜ್ಞಾನಿ, ಗಣಿತ ಶಾಸ್ತ್ರಜ್ಞ ಸತ್ತು ಇಂದಿಗೆ ಐದುನೂರು ವರ್ಷ[illegible]. ವಿಶ್ವ ಇಂದು ಅವರನ್ನು ಸ್ಮರಿಸುತ್ತದೆ.

1473 ಫೆಬ್ರುವರಿ 19 ರಂದು ವಿಸ್ತುಲಾ ನದಿಯ ದಡದ ಮೇಲಿನ ತೋರ್ ಜ[illegible] ಕೋಲಸ್ ಕೋಪರ್‌ನಿಕಸ್‌ರ ಜ[illegible]ಯಿತು. ಇವರ ತಂದೆ ಒಬ್ಬ ವ್ಯಾಪಾರಿ. ತಂದೆಯ ಮರಣದ ನಂತರ ಅಂದರೆ 1483 ರಲ್ಲಿ ಇವರ ಇಡೀ ಕುಟುಂಬ ವೂಕ್ಲಾವೆಕ್ ಗೆ ಬಂದು ವಾರ್ಮಿಯದ ಡಿಯೋಸಿಸ್ ನ ಬಿಷಪ್ ಮತ್ತು ಕೋಪರ್‌ನಿಕಸ್ ನ ಚಿಕ್ಕಪ್ಪ ಲೂಕಸ್ ವಾಕ್ಸೆಲ್‌ನೋಡ್ ರಲ್ಲಿ ಸೇರಿದರು.

ಹದಿನೆಂಟರ ಹರೆಯದ ಹುಡುಗ ಕೋಪರ್‌ನಿಕಸ್ 1491 ರಲ್ಲಿ ಕ್ರಾಕೌನ್ ಜಾಗೆಲೋನಿಯನ್ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದು ವ್ಯಾಸಂಗ ಮುಂದುವರಿಸಿ ದಿನದಿನಕ್ಕೆ ಪ್ರಗತಿಯ ದಾರಿ ತುಳಿದನು. ವೇದಾಂತ, ಖಗೋಳ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಮತ್ತು ಗಣಿತ ಶಾಸ್ತ್ರಗಳನ್ನು ಈ ವಿಷಯಗಳ ಮೇಲೆ ಅಧಿಕೃತ ಜ್ಞಾನವಿದ್ದ ಗ್ಲೋಗೋನ್ ಜಾನ್ ಮತ್ತು ಮೊಜ್ಸೀಕ್‌ಬ್ರುಡ್ಜ಼ಯುವರಲ್ಲಿ ಶಿಷ್ಯತ್ವ ಪಡೆದು ಪೋಲಿಶ್‌ನ ಹೆಸರಾಂತ ಮಾನವಿಕ ಶಾಸ್ತ್ರಜ್ಞ, ಪ್ರಕೃತಿ ವಿಜ್ಞಾನಿ, ವೈದ್ಯ ಜಾನ್ ಉಸಿನಸ್‌ರ ನೇರ ಸಂಪರ್ಕ ಪಡೆದು ವಿವಿಧ ಪ್ರಕಾರಗಳಲ್ಲಿ ಜ್ಞಾನ ಸಂಪಾದಿಸಿದರು. ಗ್ರಹಗಳ ಚಲನೆಯ ಸಿದ್ಧಾಂತಕ್ಕೆ ಸಂಬಂಧಿಸಿದ ಪ್ಟೋಲೆಮಿಯ ನಾಲ್ಕು ಪುಸ್ತಕಗಳು ಹಾಗೂ ಅರಿಸ್ಟಾಟಲ್‌ನ 'on the Heavens' ಬಗ್ಗೆ ನಡೆದ ಉಪನ್ಯಾಸಗಳಲ್ಲಿ ಇವರೂ ಪಾಲ್ಗೊಂಡಿದ್ದು ತಿಳಿದು ಬರುತ್ತದೆ. ಕ್ರಾಕೋನ್‌ನಲ್ಲಿ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಜಾಗೃತ ಇವರ ಸಂಶೋಧನಾ ಪ್ರವೃತ್ತಿ ಪ್ಟೋಲೆಮಿಯ ಪೂರ್ವಾಪರ ವಿರುದ್ಧವಾದದಲ್ಲಿ ಇವರ ಗಮನ ಹರಿಸಿತು. ಕ್ರಮೇಣ ಈ ಸಂವೇದನೆಯಿಂದ ಜ್ಯೋತಿಷ್ಯಶಾಸ್ತ್ರದ ಬಗ್ಗೆ ಶೋಧನೆ ಮಾಡಲು ಉತ್ತೇಜನ ಸಿಕ್ಕಿದಂತಾಯಿತು. ಜ್ಯೋತಿಷ್ಯಶಾಸ್ತ್ರ ಮತ್ತು ಸಾವು ಬದುಕಿನ ಸಮಸ್ಯೆಗಳ ಬಗ್ಗೆ ಇವರಿಗೆ ಆಸಕ್ತಿ ಜ್ಞಾನ ಇದ್ದಿತಾದರೂ ವೈದ್ಯಕೀಯ ಓದಲು ಇವರನ್ನು ಪ್ರೇರೇಪಿಸಲಾಯಿತು. ಈ ಕಾರಣವಾಗಿ ಇವರು ಜ್ಯೋತಿಷ್ಯಶಾಸ್ತ್ರ, ಖಗೋಳ ಮತ್ತು ವೈದ್ಯಕೀಯ ಮೂರಕ್ಕೂ ಪರಸ್ಪರ ಸಂಪರ್ಕ ಕಲ್ಪಿಸಿದರು. ಈ ಮೂರು ವಿಷಯಗಳಲ್ಲೂ ಪರಿಣತರೆನ್ನಿಸುವಷ್ಟು ಜ್ಞಾನ ಸಂಪಾದಿಸಿದರು.

ಕ್ರಾಕೋನ್‌ನಲ್ಲಿ ಎಷ್ಟು ಕಾಲವಿದ್ದರು, ಅದನ್ನು ಬಿಟ್ಟಿದ್ದ್ಯಾವಾಗ ಎಂಬ ಸಂಗತಿ ಖಚಿತವಾಗಿಲ್ಲ. 1495 ರ ಶರದೃತುವಿನಲ್ಲಿ ಕೋಪರ್‌ನಿಕಸ್ ತನ್ನ ಚಿಕ್ಕಪ್ಪನಲ್ಲಿಗೆ ಬಂದಿದ್ದರು. ಚಿಕ್ಕಪ್ಪ ಲೂಕಸ್‌ರ ಆದೇಶದ ಮೇರೆಗೆ ಇವರು ಮುಂದಿನ ವರ್ಷವೇ ಬೊಲೊಗ್ನಾಗೆ ತೆರಳಿ ಅಲ್ಲಿ ನ್ಯಾಯ ಶಾಸ್ತ್ರ ಅಭ್ಯಸಿಸಿದರು. ಚರ್ಚಿನ ಉನ್ನತ ಕಚೇರಿಯಲ್ಲಿ ಸೇವೆ ಸಲ್ಲಿಸಲು ಈ ನ್ಯಾಯ ಶಾಸ್ತ್ರ ಕಲಿಕೆಯ ಉದ್ದೇಶವಾಗಿತ್ತು.

ಬೊಲೊಗ್ನಾದಲ್ಲಿ ವ್ಯಾಸಂಗ ಮಾಡುತ್ತಿದ್ದಾಲೇ ಖಗೋಳ ಶಾಸ್ತ್ರದಲ್ಲಿ ಇವರಿಗೆ ಅತೀವ ಶ್ರದ್ಧೆ ಮೂಡಿ ಬಂತು. ಖ್ಯಾತ ಪ್ರಾಚಾರ್ಯರುಗಳಿಂದ ಉಪನ್ಯಾಸಗಳನ್ನು ಕೇಳುವುದರೊಂದಿಗೆ, ಹಲವಾರು

ವೀಕ್ಷಣಾವಲೋಕನಗಳನ್ನು (observations) ಸೂರ್ಯ ಮತ್ತು ಇತರ ಮುಖ್ಯ ಗ್ರಹಗಳ ಮೇಲೆ ನಡೆಸುತ್ತಿದ್ದರು. ಸಮಕಾಲೀನ ಖಗೋಳಶಾಸ್ತ್ರಜ್ಞರಲ್ಲೇ ಖ್ಯಾತರಾಗಿದ್ದ ಡೊಮೆನಿಕೊ ಮರಿಯ ನೊವಾರಾ(1454–1504) ರ ಪ್ರಭಾವ ಕೋಪರ್ನಿಕಸ್‌ರ ಮೇಲೆ ವಿಶೇಷವಾಗಿ ಬಿದ್ದಿತು. ವಿಶೇಷ ರೀತಿಯ ಋಣಾತ್ಮಕ ಟೀಕೆಯನ್ನು ಧನಾತ್ಮಕ ಅವಲೋಕನಕ್ಕಾಗಿ ವರ್ಗೀಕರಿಸುವುದರಿಂದ ಅದು ಪ್ರತ್ಯಕ್ಷಾಭಾಸವಾಗಿರುವ ಪ್ಟೋಲೆಮಿ ಪದ್ಧತಿಗಿಂತಲೂ ಸುಧಾರಿತವಾಗಿರುತ್ತದೆ. ಅವರು ಈ ನಿಟ್ಟಿನಲ್ಲಿ ನಿಜಾಂಶ ಅರಿಯಲು, ವ್ಯವಹಾರ ನಡೆಸಲು ಯೋಗ್ಯ ಪದ್ಧತಿಯೆಂದು ತಿಳಿಹೇಳಿದ ನೋವಾರವರು ಇವರನ್ನು ಈ ದಿಸೆಯಲ್ಲಿ ಹುರಿದುಂಬಿಸಿದರು.

ನಾಲ್ಕು ವರ್ಷಗಳ ಕಾಲ ಇಟಲಿಯಲ್ಲಿದ್ದು ನಂತರ 1501 ರ ವಸಂತದಲ್ಲಿ ವರ್ಮಿಯಾಗೆ ಹಿಂತಿರುಗಿದ ಕೋಪರ್‌ನಿಕಸ್, ಸೋದರ ಆಂಡ್ರ್ಯೂರವರೊಂದಿಗೆ, ಹೊರದೇಶದಲ್ಲಿ ವ್ಯಾಸಂಗ ಮುಂದುವರಿಸಲು ಸಹಾಯಧನಕ್ಕಾಗಿ ಬರೆದುಕೊಂಡರು. ಅದೇ ವರ್ಷದ ಜುಲೈ 27 ರಲ್ಲಿ ಇವರ ಬೇಡಿಕೆ ಬಿಷಪ್ಸ್ ಚಾಪ್ಟರ್‌ರಿಂದ ಅಂಗೀಕೃತವಾಗಿ ಇಲ್ಲಿಯೂ ಸಹ ಇವರ ಬೇಡಿಕೆ ಬಿಷಪ್ಸ್ ಚಾಪ್ಟರಿಂದ ಅಂಗೀಕೃತವಾಗಿ ಇಲ್ಲಿಯೂ ಸಹ ಇವರು ವೈದ್ಯಕೀಯ ಓದಲು ಶಿಫಾರಸ್ಸು ಮಾಡಲಾಯಿತು. ವಿಶ್ವವಿದ್ಯಾಲಯದಲ್ಲಿ ಇವರ ವ್ಯಾಸಂಗ ಮುಂದುವರಿಯಿತು. ಈ ವಿಶ್ವವಿದ್ಯಾಲಯದಲ್ಲಿ ಸೇರ್ಪಡೆಯಾದ ವಿದ್ಯಾರ್ಥಿಗೆ ವಿದ್ಯಾ ಕ್ಷೇತ್ರದಲ್ಲೇ ವಿಶೇಷ ಮರ್ಯಾದೆಯಿತ್ತು. ಸ್ವಬುದ್ಧಿಯನ್ನು ಮುಕ್ತಮಾರ್ಗದಲ್ಲಿ ಬಳಸಿಕೊಳ್ಳಲು ಈ ವಿಶ್ವವಿದ್ಯಾಲಯ ಹಲವು ಸವಲತ್ತುಗಳನ್ನು ವಿದ್ಯಾರ್ಥಿಗಳಿಗೆ ಮಾಡಿ ಕೊಟ್ಟಿತ್ತು. ತೀಕ್ಷ್ಣಬುದ್ಧಿಯ ಲವಲವಿಕೆಯ ವಿದ್ಯಾರ್ಥಿಯೆಂದು ಜಗಲೋನಿಯನ್ ವಿಶ್ವವಿದ್ಯಾಲಯದಲ್ಲಿ ಒಳ್ಳೆಯ ಹೆಸರು ಪಡೆದಿರು ಕೋಪರ್‌ನಿಕಸ್.

ಆ ಕಾಲದಲ್ಲಿ, ಪಡ್ವಾ ವಿಶ್ವವಿದ್ಯಾಲಯದ ವೈದ್ಯಕೀಯ ಶಿಕ್ಷಣದ ಅವಧಿ ಮೂರು ವರ್ಷಗಳ ತರಬೇತಿ ಕಾಲದ್ದಾಗಿತ್ತು. ಇಲ್ಲಿ ಮುಖ್ಯವಾಗಿ ಓದಬೇಕಾದುದ್ದು ನಾಲ್ಕು ವಿಷಯಗಳು. ವೈದ್ಯಕೀಯ ಸೈದ್ಧಾಂತಿಕವಾದಿ ಪ್ರಚಾರ್ಯರು, ಅವಿಸೆನ್ನಾರ ಕಾನನ ಆಫ್ ಮೆಡಿಸನ್, ಹಿಪೊಕ್ರಾಟ್ ಅಫೊರಿಸಮ್ಸ್ ಹಾಗೂ ಮೂರನೆ ವರ್ಷದ ಪಠ್ಯ ಕ್ರಮವಾಗಿ ಗ್ಯಾಲೆನ್ಸರ್ ಆರ್ಸ್ ಪರ್ವಾ ಅಥವಾ ಮೈಕ್ರೊಟೆಗ್ನಿಯರ ಬಗ್ಗೆ ಉಪನ್ಯಾಸಗಳಿರುತ್ತಿದ್ದುವು. ವ್ಯಾಸಂಗದ ಪ್ರಾಯೋಗಿಕಾಂಶ ಜ್ವರ ಮತ್ತು ಕೆಲ ನಿರ್ದಿಷ್ಟ ಕಾಯಿಲೆಯೊಂದಿಗೆ ಸಂಬಂಧಿಸಿದುದಾಗಿತ್ತು. ಪದವಿ ಪಡೆಯಲು ಮೊದಲ ಎರಡು ವರ್ಷಗಳ ವ್ಯಾಸಂಗದ ಜೊತೆಗೆ ಮೂರನೆ ವರ್ಷ ಮುಗಿಸಿದಾಗ ಪಿಹೆಚ್.ಡಿ. ತರಬೇತಿ ಕಾಲದಲ್ಲಿ ಒಬ್ಬ ನುರಿತ ವೈದ್ಯರ ಕೆಳಗೆ ಕೆಲಸ ಮಾಡುವುದು ಅನಿವಾರ್ಯವಾಗಿತ್ತು.

16 ನೇ ಶತಮಾನದ ಮೊದಲಲ್ಲಿ ಪಡ್ವಾದ ತಜ್ಞ ಶಿಕ್ಷಕರಾದ ಮಾರ್ಕ್ಕೊ ಅಂಟಾನಿಯ ಡೆಲಾ ಟೋರೆ (1473–1505) ಗ್ಯಾಬ್ರೀಲ ಜೆರ್ಬಿ-(1486–1505) ಗರೋಲಮೋ ಡಿ ಅರ್ಬನೊ ಫಲಾಪ್ಪೊ ಪೊಮೊಡೊರಾ ಮುಂತಾದವರಿಂದ ಜೀವನ ರಚನಾ ಶಾಸ್ತ್ರ ಮತ್ತು ಸೈದ್ಧಾಂತಿಕ ಔಷಧದ ಬಗೆಗಿನ ಔಚಿತ್ಯವನ್ನು ಅರಿತುಕೊಂಡರು. ಅನಟೊಮಿಕೊಪಾಥಲಾಜಿಕಲ್ (Anatomicopathological) ಅವಲೋಕನ ವೈದ್ಯಕೀಯ ಪ್ರಗತಿಯಲ್ಲಿ ಮೂಲಕಾರಣವಾಗುತ್ತದೆಯೆಂಬುದರ ಬಗ್ಗೆ ಶಿಕ್ಷಣ ಕೊಡಲಾಯಿತು. ಹೆಸರಾಂತ ವೈದ್ಯ, ಭೌತವಿಜ್ಞಾನಿ, ಖಗೋಳ ಶಾಸ್ತ್ರಜ್ಞ ಮತ್ತು ಕವಿಯೆನಿಸಿದ ಗಿರೊಲಾಮೊ ಫ್ರಾಕಸ್ಟೋರೊ (1473–(1553) ರವರಿಂದಲೂ ಕೋಪರ್‌ನಿಕಸ್‌ಗೆ ಮಾರ್ಗದರ್ಶನವಾಯಿತು.

ತನ್ನ ನಿಟ್ಟಿನಲ್ಲಿ ಕಾರ್ಯನಿಷ್ಠನೆಂಬ ಪ್ರಶಂಸೆ ಗಳಿಸಿದ ಇವರು ವೈದ್ಯಕೀಯ ಓದಿಕೊಂಡು ಸಿಕ್ಕ ಬಿಡುವಿನಕಾಲದಲ್ಲಿ ಕೆಲವಾರಗಳಲ್ಲೇ ನ್ಯಾಯಶಾಸ್ತ್ರದಲ್ಲಿ ಪದವಿಯನ್ನು ಗಳಿಸಿಬಿಟ್ಟಿದ್ದರು. ಇವರ ಬುದ್ಧಿಮತ್ತತೆ ಪ್ರಕಾಶಕ್ಕೆ ಬಂದು ನಾಲ್ಕಾರು ಕಡೆ ಪ್ರಸರಿಸಿ ಹಲವು ಹಿರಿಯರ ಅನುಗ್ರಹಕ್ಕೆ ಪಾತ್ರರಾದರು.

(1505) ರಲ್ಲಿ ವೈದ್ಯಕೀಯ ಓದಿ ಪಡ್ವಾ ವಿಶ್ವವಿದ್ಯಾಲಯದಿಂದ ಪ್ರವೀಣತಾ ಪತ್ರ ಪಡೆದರು. ಇದರಿಂದ ಇವರು ವೈದ್ಯಕೀಯ ವೃತ್ತಿ ಪ್ರಾರಂಭಿಸಲು ಅನುವಾಯಿತು. ಕೋಪರ್‌ನಿಕಸ್‌ಗೆ ದೊರೆತ ಪ್ರಶಸ್ತಿ, ಬಿರುದು, ಸನ್ನದು ಹಾಗೂ ಇತರೆ ಬಹುಮಾನಗಳನ್ನು ಪಡ್ವಾದ ಮೆಡಿಕಲ್ ಆರ್ಕೈವ್ಸ್‌ನಲ್ಲಿ 1503 ರಿಂದ 1507 ರವರೆಗೂ ಇಡಲಾಗಿತ್ತು. ದುರಾದೃಷ್ಟವಶಾತ್ ಏನು ಕಾರಣವೋ ಅವೆಲ್ಲಾ ನಾಶವಾಗಿದ್ದವು. ಮತ್ತೆ ಅವುಗಳ ಸಂಗ್ರಹಣೆ ಮಾಡಲಾಗಲಿಲ್ಲ. ಈ ಕಾರಣವಾಗಿ ಕೋಪರ್‌ನಿಕಸ್‌ಗೆ ಡಾಕ್ಟರ್ ಪದವಿ ತಪ್ಪಿತೆನ್ನಲಾಗಿದೆ. ವಿವಿಧ ರಂಗಗಳಲ್ಲಿ ಅವರು ಪರಿಣತರಾದ ಬಗ್ಗೆ ಹಲವಾರು ದಾಖಲೆಗಳು ವ್ಯವಹಾರ ದೃಷ್ಟಿಯಿಂದ ಪ್ರಕಾಶಗೊಳ್ಳಲಿಲ್ಲ. ಕೊನೆಗೆ ಪ್ರಶ್ಯಾದ ಡ್ಯೂಕ್ ಆಲ್‌ಬ್ರೆಚ್ ಮತ್ತು ಪೊಲೀಶನ ಖ್ಯಾತ ಇತಿಹಾಸಜ್ಞ ಮಾರ್‌ಕಿನ್ ಕ್ರೋಮರ್ ಹಾಗೂ ಬಿಷಪ್ ಆಫ್ ವರ್ಮಿಯಾರವರಿಂದ ಡಾಕ್ಟರ್ ಆಫ್ ಮೆಡಿಸಿನ್(M·D) ಯೆಂದು ಕರೆಸಿ ಕೊಂಡರು. ಈ ಬಗ್ಗೆ ಅವರುಗಳಿಂದ ಬಂದ ಪತ್ರದಲ್ಲಿ ವಿವರವಿದೆ. ಒಂದು ಸ್ಮರಣ ಫಲಕದಲ್ಲಿ 'Artium et medicinal Doctor' ಯೆಂಬ ಶಬ್ದಗಳು ಕೆತ್ತಲ್ಪಟ್ಟು, ಫಲಕವನ್ನು ಕೋಪರ್ನಿಕಸ್‌ನ ಗೌರವಾರ್ಥವಾಗಿ ಇಂದಿಗೂ ಫ್ರೊಂಬರ್ಕ್ ಕ್ಯಾಥಡ್ರಲ್‌ನ ಎದುರು ಸ್ಥಾಪಿಸಲಾಗಿದೆ. 1507 ರಲ್ಲಿ ಪೋಲೆಂಡ್‌ಗೆ ಹಿಂತಿರುಗಿದ ಕೋಪರ್‌ನಿಕಸ್ ಚಾಪ್ಟರ್ ಆಫ್ ವರ್ಮಿಯಾರ ಖಾಸಗಿ ವೈದ್ಯರಾಗಿ ಕೆಲಸ ಮಾಡಿದರು. ನಂತರ ಇವರ ಸೇವೆ ವ್ಯಾಪಕ ಸ್ವರೂಪಗೊಂಡು ಸಾಮಾನ್ಯ ಜನತೆಯೂ ಇವರಿಂದ ವೈದ್ಯಕೀಯ ಉಪಚಾರ ಪಡೆಯುವಂತಾಯಿತು. ಚಾಪ್ಟರ್ ಆಫ್ ವರ್ಮಿಯಾರ ಕಟ್ಟುನಿಟ್ಟಿನ ಸಂಯಮ ಕೋಪರ್ನಿಕಸ್‌ಗೆ ಬಾಧಿಸಲಿಲ್ಲ. ಕೈಲಿ ಕಣಿವೆಯ ಲಿಲಿ ಹೂ ಹಿಡಿದ ಇವರ ಬಹಳ ಹಳೆಯ ಭಾವಚಿತ್ರವೊಂದು ವೈದ್ಯಕೀಯ ವೃತ್ತಿಯ ಲಾಂಛನವಾಗಿ ಇನ್ನೂ ಉಳಿದಿದೆ.

ತನ್ನ ಚಿಕ್ಕಪ್ಪ ಲೂಕಸ್‌ರ ಆಣತಿಯ ಮೇರೆಗೆ ಲಿಡ್ಜಾಬಾರ್ಕ್‌ಗೆ ಹಿಂತಿರುಗಿ 1512 ರವರೆಗೂ ವೈದ್ಯಕೀಯ ವೃತ್ತಿಯಲ್ಲಿ ತೊಡಗಿದ್ದರು. ನಂತರ ತಮ್ಮ ಜೀವನವಿಡೀ ಅಂದರೆ 1543 ರ ವರೆಗೆ ಫ್ರಂಬರ್ಕ್‌ಗೆ ಬಂದು ನೆಲಸಿದರು. ಅಲ್ಲಿ ಜಗತ್ತನ್ನೇ ಮರೆತು ತಮ್ಮಲ್ಲಿ ತಾವೇ ತನ್ಮಯರಾಗಿ ತಾವೇ ಸಜ್ಜುಗೊಳಿದ ವೀಕ್ಷಣಾಕೇಂದ್ರದಲ್ಲಿ ತಮ್ಮ ನಿಟ್ಟಿನ ಕಾರ್ಯದಲ್ಲಿ ಮಗ್ನರಾದರು. ಏಕಾಂತ ವಾತಾವರಣದಲ್ಲಿ ಕುಳಿತು ಗಣಿತ ಶಾಸ್ತ್ರದ ಸಮಸ್ಯೆಗಳನ್ನು ಬಿಡಿಸಿ 'ಅವಕ್ಕೆ ಸ್ವಚ್ಛ ರೂಪು ತಂದರು. ಕಾಲದ ಗಣನೆ, ಹಸಿವು, ನಿದ್ರೆಯ ಪರಿವೆಯಿಲ್ಲದೆ ನಡೆಸಿದ ಯತ್ನ ಪರಿಪೂರ್ಣ ಸಫಲತೆ ಹೊಂದಿ ಖಗೋಳ ಶಾಸ್ತ್ರದಲ್ಲಿ ಮಹಾನ್ ಸಂಗತಿಗಳನ್ನು ಕಂಡುಹಿಡಿದು ವಿಜ್ಞಾನ ಯುಗದಲ್ಲೇ ಮಹಾನುಭಾವನೆನೆಸಿದರು.

ಖಗೋಳಶಾಸ್ತ್ರ ಶೋಧನೆಯಲ್ಲೆ ತಮ್ಮ ಜೀವನ ಸವೆಸಿದ್ದರೂ ವೈದ್ಯಕೀಯವನ್ನು ಮಾತ್ರ ಬಿಟ್ಟಿರಲಿಲ್ಲ. ಪಾಮರರ ಸೇವೆಗೆ ಅದು ಯಾವಾಗಲೂ ಸಿದ್ಧವಾಗಿತ್ತು. ರೋಗ ರುಜಿನ ಪೀಡಿತ ಜನತೆ ತಮ್ಮ ಮನೆಗೆ ಹೊತ್ತು ಗೊತ್ತು ಇಲ್ಲದ ಸಮಯದಲ್ಲಿ ಯಾವಾಗ ಬಂದರೂ ವೈದ್ಯಕೀಯ ಉಪಚಾರ ನಡೆಸಿ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡಿ ಕಳಿಸುತ್ತಿದ್ದರು. ಇವರ ಸೋದರರ ಸಹಕಾರದೊಡನೆ ಕುಷ್ಠ, ಮಲೇರಿಯಾ ರೋಗಗಳಿಂದ ಬಾಧೆ ಪಡುತ್ತಿದ್ದ ಜನತೆಗೆ ಔಷಧೋಪಚಾರ ನಡೆಸಿ ರೋಗ ನಿರ್ಮೂಲನ ಮಾಡಿದ್ದರು. 'The master of Frombork' ಎಂದು ಕರೆಸಿಕೊಂಡ ಕೋಪರ್‌ನಿಕಸ್‌ನ ಬಳಿ ಪ್ರತಿಷ್ಠಿತ ವ್ಯಕ್ತಿಗಳೂ ಶುಶ್ರೂಷೆಗಾಗಿ ಬರತೊಡಗಿದರು. ಇವರದು ಬಡವ ಬಲ್ಲಿದ ಎಲ್ಲರಿಗೂ ಒಂದೇ ತೆರನಾದ ಉಪಚಾರ. ಇಷ್ಟಾದರೂ ಅವರು ಯಾರಿಂದಲೂ ಒಂದು ಕಾಸನ್ನೂ ಮುಟ್ಟುತ್ತಿರಲಿಲ್ಲ.

ಕೋಪರ್‌ನಿಕಸ್‌ರ ಜ್ಞಾನ ಪ್ರತಿಭೆ ದಿನ ದಿನಕ್ಕೆ ಪ್ರತಿಫಲಿಸಲಾರಂಬಿಸಿತು. ವೈದ್ಯಕೀಯ ರಂಗದಲ್ಲಿ ಎಷ್ಟು ಗ್ರಂಥಗಳಿದ್ದುವೋ ಅವನ್ನೆಲ್ಲಾ ತಂದು ತಮ್ಮ ಗ್ರಂಥ ಭಂಡಾರದಲ್ಲಿ ತುಂಬಿದ್ದರು. ಈ ಗ್ರಂಥಗಳು

ಈಗ ಸ್ವೀಡನ್ನಿನ ಯುಪ್ಸಾಲ ಮತ್ತು ಸ್ಟ್ರಾಂಗ್ನಸ್ ವಿಶ್ವವಿದ್ಯಾಲಯಗಳ ಪುಸ್ತಕಾಲಯಗಳಲ್ಲಿವೆ. ವೈದ್ಯಕೀಯ ವಿಷಯಕ್ಕೇ ತಾಗಿಕೊಂಡು ಅಂಶಗಳಲ್ಲಿ ಪರಿಪಕ್ವತೆ ತುಂಬಿ, ಓದುಗನ ಮನಸ್ಸಿಗೆ ಪೂರ್ಣ ತೃಪ್ತಿಕೊಡುವ ಪುಸ್ತಕಗಳಿವೆ. ಆಸಕ್ತಿ ಕೆರಳಿಸುವುದೇ ಅವುಗಳ ವೈಶಿಷ್ಟ್ಯ. ಕೋಪರ್ ನಿಕಸ್‌ರವರು ಯಾವುದಾದರೂ ಒಂದು ಗ್ರಂಥವನ್ನು ಹಿಡಿದು ಓದಲು ಕುಳಿತಾಗ ಅನುಸರಿಸುತ್ತಿದ್ದ ಕ್ರಮ ಗತಿಯೆಂದರೆ, ಎಡಗೈಯಲ್ಲಿ ಪುಸ್ತಕ ಹಿಡಿದು ಬಲಗೈಯಲ್ಲಿ ಲೇಖಣಿಯಿಂದ ಅಲ್ಲಲ್ಲಿ ಟಿಪ್ಪಣಿ ಮಾಡುತ್ತಾ, ಓದಿದಷ್ಟನ್ನು ಪೂರ್ಣ ಜೀರ್ಣಿಸಿಕೊಳ್ಳುತ್ತಿದ್ದರು. ತಮಗಾದ ಸಂಶಯ ತಿಳಿಯಾಗುವವರೆಗೂ ಆ ಅಂಶದಲ್ಲೇ ತನ್ಮಯರಾಗುತ್ತಿದ್ದರಂತೆ. ತಾವು ಮಾಡಿದ ಟಿಪ್ಪಣಿಯ ವಿಶ್ಲೇಷಣೆಯಿಂದ ಬಂದ ಪರಿಹಾರದಿಂದ ಜನತೆಗೆ ಔಷಧೋಪಚಾರ ನಡೆಸುತ್ತಿದ್ದರು ಕೋಪರ್ನಿಕಸ್.

ಈಕ್ಲೆಡ್‌ರ ಸಾಧನೆ ಕುರಿತಾದ ಗ್ರಂಥ ಯುಪ್ಸಾಲ ಪುಸ್ತಕಾಲಯದಲ್ಲಿದ್ದು ಅದರಲ್ಲಿ ಈ ವೈದ್ಯ–ಖಗೋಳಜ್ಞರ ಕೈ ಬರಹದಲ್ಲಿ ಔಷಧಕ್ಕೆ ಬಳಸಿಕೊಳ್ಳಬಹುದಾದ ತರಕಾರಿ ಮತ್ತು ಖನಿಜ ಮೂಲ, ಅಮೂಲ್ಯ ಹರಳುಗಳು, ವಿವಿಧ ಲೋಹ, ಬಂಗಾರದ ಪುಡಿ, ಬೆಳ್ಳಿ, ಮರಕತ (Emerald), ಪಾರದರ್ಶಿ ನೀಲಮಣಿ (Sapphire), ಹವಳ, ಹೀಗೆ ಇಪ್ಪತ್ತೊಂದು ವಸ್ತುಸಾರ ತತ್ವವನ್ನು ವಿವರಿಸಲಾಗಿದೆ. ಇವುಗಳಿಂದ ತಯಾರಾದ ಔಷಧಗಳು ಮಹತ್ವಪೂರ್ಣ ಪರಿಣಾಮ ಉಂಟುಮಾಡುವುದಾದರೆ ಇದಕ್ಕೆ ತಗಲುವ ವೆಚ್ಚ ಅಪಾರ. ತಯಾರಿಕೆ ಮಾರಾಟ ಎರಡೂ ಕಷ್ಟವಾಗಿದ್ದ ಕಾಲವದು. ಈ ಎರಡು ಬಗೆಯನ್ನೂ ಯೋಚಿಸಿದ ಕೋಪರ್ನಿಕಸ್‌ನ ಆ ಮಧ್ಯಕಾಲಿನ ಔಷಧ ಸಾಹಿತ್ಯದೊಂದಿಗೆ ಸರಳ ಗಿಡಮೂಲಿಕೆಯಿಂದ ಪರಿಹಾರವನ್ನು ಪಡೆಯಲು ರೂಢಿಯಲ್ಲಿದ್ದುದನ್ನು ಬಳಸಿಕೊಂಡ. ತಮ್ಮ ಅನುಭವದ ಮೂಸೆಯಿಂದ ಭಟ್ಟಿ ಇಳಿಸಿದ ಸರಳ ಗಿಡಮೂಲಿಕೆಗಳ ಪರಿಹಾರೋಪಾಯದ ಗ್ರಂಥ ಬರೆದರು. ಯೂಕ್ಲಿಡ್‌ನ ಔಷಧದಷ್ಟೇ ಪರಿಣಾಮಕಾರಿಯಾಗಿತ್ತು ಈ ವೆಚ್ಚವಿಲ್ಲದ ಸರಳ ಗಿಡಮೂಲಿಕೆಗಳ ಪರಿಹಾರೋಪಾಯ.

ಕೋಪರ್ನಿಕಸ್‌ರ ಸೇವೆ ಹಲವು ರಂಗಗಗಳಿಗೆ ಹರಡಿದ್ದು ತಾನೆ. ಖಗೋಳಜ್ಞ, ವೇದಾಂತಿ, ಜ್ಯೋತಿಷಿ, ಗಣಿತಶಾಸ್ತ್ರಜ್ಞ, ಹಾಗೂ ವೈದ್ಯನಾಗಿ ಹೆಸರುಪಡೆದ ಇವರು ಸ್ಯಾನಿಟರಿ ಇಂಜಿನಿಯರಿಂಗ್ ಓದಿ ಅದರಲ್ಲೂ ಪ್ರವೀಣರಾದರು. ವರ್ಮಿಯಾ ಮತ್ತು ಫ್ರಂಬರ್ಗ್‌ಗಳ ಜನತೆಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ನೀರು ಸರಬರಾಜಿನ ವಿನ್ಯಾಸ ತೆಗೆದು ಉಪಕಾರಗೈದರು. ಇವರಿಗೆ ಶ್ರದ್ಧಾಂಜಲಿ ಅರ್ಪಿಸುವ ಅಲ್ಲಿಯ ಜನತೆ ಫ್ರಂಬರ್ಗ್‌ನಲ್ಲಿ "ಪ್ರಕೃತಿಯಿಂದ ದುಸ್ಸಾಧ್ಯವಾದುದನ್ನು ಇವರ ಬುದ್ಧಿಶಕ್ತಿ ನಮಗೆ ವರಪ್ರಸಾದವಿತ್ತಿದೆ" ಎಂದು ಲ್ಯಾಟಿನ್‌ನಲ್ಲಿ ಕೆತ್ತಿದ್ದು ಈಗಲೂ ಇದೆ.

ಈ ವಿಜ್ಞಾನಿಯ ಪತ್ರವ್ಯವಹಾರ ಮತ್ತು ಟಿಪ್ಪಣಿಗಳನ್ನು ಓದಿದ ಕುರ್‌ಜೆಲ್‌ವ್ರೋದ ಫಾದರ್ ಜಾನ್ ಬ್ರೊಜೆಕ್‌ರ ಪ್ರಕಾರ, ಅರ್ಕಿಮಿಡಿಸ್‌ನ ಔಷಧ ಮತ್ತು ಯಾಂತ್ರಿಕಜ್ಞತೆಯಲ್ಲಿ ಪರಸ್ಪರ ಹೋಲಿಸಿ ತುಲನೆಮಾಡಿ ಮೌಲ್ಯಕಂಡುಹಿಡಿದ ಕೋಪರ್ನಿಕಸ್ ಗಣಿತದ ನಮೂನೆಯನ್ನು ವೈದ್ಯಕೀಯದಲ್ಲಿ ಅಭಿವೃದ್ಧಿಗೊಳಿಸಲು ಯತ್ನಿಸಿದರು ಎಂದಿದ್ದಾರೆ. ಬ್ರೊಜೆಕ್‌ರು ನೀಡುವ ಆಧಾರಾಂಶಗಳಿನುಗುಣವಾಗಿ ಕೋಪರ್ನಿಕಸ್‌ರ ಸಿದ್ಧಾಂತವಿದ್ದ ದಾಖಲೆ ಮತ್ತೆ ಸಿಗಲಿಲ್ಲವೆನ್ನುತ್ತಾರೆ. ಈ ಸಿದ್ಧಾಂತವನ್ನು ಕಾರ್ಯಗತ ಮಾಡಲು ಸಾಧ್ಯವಾಯಿತೆಯೆನ್ನುವುದೂ ಖಚಿತಪಲಾಗಲಿಲ್ಲ.

ಕೋಪರ್ನಿಕಸ್ ವೈದ್ಯಕೀಯ ವೃತ್ತಿಯಲ್ಲಿದ್ದಾಗ 'De revolutionibus orbium coelestium' ಎಂಬ ಶೀರ್ಷಿಕೆಯಲ್ಲಿ ಪುಸ್ತಕ ಬರೆಯತೊಡಗಿದರು. ಖಗೋಳ ಚಲನ ಶಾಸ್ತ್ರದ ಮೇಲೆ ಬರೆದ ಮಹಾಪ್ರಬಂಧ ಪುಸ್ತಕ ಇದು. ಇದನ್ನು ಬರೆದೇನೋ ಆಗಿತ್ತು. ಆದರೆ ಪ್ರಕಟಿಸುವುದೊಂದು ಬಾಕಿಯಿದ್ದಿತು. ಇದನ್ನು ಪ್ರಕಟಿಸಲು ವಿಟ್ಟೆನ್‌ಬರ್ಗ್ ವಿಶ್ವವಿದ್ಯಾಲಯದ ತರುಣ ಪ್ರಾಚಾರ್ಯ ಜಾರ್ಜ್ ಜೋಚಿಮ್ ರೆಟಿಕ್‌ರ ಒತ್ತಾಸೆಯಿದ್ದುದರಿಂದ

(25 ನೇ ಪುಟ ನೋಡಿ)

ಸಾಹಿತಿ-ಕ್ರಾಂತಿ

— ರಾಮದಾಸ್

ಸಮಾಜವನ್ನು ಬಿಟ್ಟು ವ್ಯಕ್ತಿ ಬದುಕಲಾರ. ವ್ಯಕ್ತಿಯೊಬ್ಬನನ್ನು ಬಿಟ್ಟು ಸಮಾಜ ಬದುಕಬಲ್ಲುದು. ಸಮಸ್ತ ವ್ಯಕ್ತಿಗಳ ಹಿತಾಹಿತವೇ ಸಮಾಜದ ಹಿತಾಹಿತ, ವ್ಯಕ್ತಿಯೊಬ್ಬನ ಹಿತಾಹಿತ, ಆತನದ್ದು ಮಾತ್ರ. ಹಲವರ ನೋವು ಸಮಾಜದ ಆರೋಗ್ಯಕ್ಕೆ ಮಾರಕವಾಗಬಹುದು. ಕೆಲವರ ನೋವು ಹಾಗಾಗದು. ಅನ್ಯಾಯ, ಹಿಂಸೆ, ಶೋಷಣೆ ಮುಂತಾದುವು ಕೆಲವರನ್ನಲ್ಲ, ಹಲವರನ್ನು ಬಾಧಿಸುವಾಗ ಸಮಾಜದ ಸ್ವಾಸ್ಥ್ಯ ಕೆಡುತ್ತದೆ. ಅಸಮಾಧಾನದ ಕಿಡಿ ಹೊತ್ತಿ, ಅತೃಪ್ತಿಯ ಹೊಗೆ ಮುತ್ತಿ, ವಿಹ್ವಲವಾಗಿ ಪರಿತಪಿಸಿ ಕಡೆಗೊಂದು ದಿನ ಕಟ್ಟು ಹರಿದು ಸ್ಫೋಟವಾಗುತ್ತದೆ. ಕ್ರಾಂತಿ. ನೋವು ವ್ಯಕ್ತಿಯೊಬ್ಬನದಲ್ಲ, ಕೆಲವರದ್ದು ಮಾತ್ರವಲ್ಲ; ಹಲವರದ್ದು, ಸಮಾಜದಲ್ಲಿ ಬಹು ಸಂಖ್ಯಾತರಾದವರದ್ದು ಎಂಬ ಎಚ್ಚರವುಂಟಾದಾಗ ಆಗುವ ಸ್ಫೋಟ ಅದು. ಆ ಸ್ಫೋಟದ ಝಳದಲ್ಲಿ ವಿಚಾರದ, ವಿವೇಕದ ಪಾತ್ರ ಕಿರಿದು. ಸದ್ಯೋಜಾತ ಭಾವಾವೇಶದ ಪಾತ್ರ ಹಿರಿದು.

ದೇಹದ ಆರೋಗ್ಯ ಚೆನ್ನಾಗಿದ್ದು, ಮನಸ್ಸು ಸಾಕಷ್ಟು ಪ್ರಫುಲ್ಲವಾಗಿರುವಾಗ ಕಾವ್ಯ, ಕಥೆ, ಕಾದಂಬರಿಗಳ ಓದು ಸಾಗುತ್ತದೆ. ಒಳಗೊಳಗೇ ಕುದ್ದು, ಕಾವಾಗಿ, ಕಿಡಿ ಹೊತ್ತಿ, ಸ್ಫೋಟವಾಗಬೇಕಾದ ಕ್ರಾಂತಿ; ಇಂಥ ಓದಿನ ಪರಿಣಾಮವಾಗಿ ಸಂಭವಿಸುವ ಸಾಧ್ಯತೆ ತೀರ ಕಡಮೆ, ಇಲ್ಲವೇ ಇಲ್ಲ ಎಂಬಷ್ಟು ಗೌಣ. ವಾಸ್ತವ ಜೀವನದಿಂದ ಒಂದು ರೀತಿಯ ಪಲಾಯನ ಮಾಡಲು ಸಾಹಿತ್ಯ ನೆರವಾಗುವ ಸಾಧ್ಯತೆ ಹೆಚ್ಚು. ಒಟ್ಟಿನಲ್ಲಿ ಸಾಹಿತ್ಯ ಕ್ರಿಯೆಗೆ ಪ್ರೇರಕವೂ ಅಲ್ಲ, ಪೋಷಕವೂ ಅಲ್ಲ; ಪೂರಕವಾಗಬಹುದು. ಇನ್ನು ಸಾಹಿತ್ಯದಿಂದ ಕ್ರಾಂತಿ ಎಂಬ ಮಾತಂತೂ ದೂರವೇ.

ಸಾಹಿತಿ ಕ್ರಾಂತಿಕಾರಿಯಾಗಬಹುದು. ತನ್ನ ವ್ಯಕ್ತಿತ್ವದ ಸಂಕುಚಿತ ವೃತ್ತವನ್ನು ಮೀರಿ, ಹಲವರ ನೋವಿಗಾಗಿ ಮಿಡಿಯುವ ಹೃದಯವಷ್ಟೇ ಇದ್ದರೆ ಆತ ಬರೀ ಸಾಹಿತಿಯಾದಾನು. ಆ ಸಾರ್ವತ್ರಿಕ ನೋವನ್ನು ನಿವಾರಿಸಬೇಕೆಂಬ ಹಂಬಲ ಹುಟ್ಟಿ ಅದು ಛಲವಾಗಿ ಮಾರ್ಪಟ್ಟರೆ, ಅದಕ್ಕಾಗಿ ಆತ ಕ್ರಿಯಾಶೀಲನಾದರೆ ಆಗ ಆತ ಸಾಹಿತ್ಯ ಸೃಷ್ಟಿಗೆ ಮಹತ್ವ ನೀಡದೆ ಕ್ರಾಂತಿಕಾರಿಯಾದಾನು. ಆ ನೋವು ತನ್ನೊಳಗೆ ಮಾತ್ರ ಹುಟ್ಟಿ ಬೆಳೆಯುತ್ತಿರುವ ರೋಗವಲ್ಲ, ಹಲವರನ್ನು ತಬ್ಬಿ ಹಬ್ಬುತ್ತಿರುವ ಅಂಟುಜಾಡ್ಯ ಎಂಬುದನ್ನು, ಅದಕ್ಕೆ ಬಲಿಯಾದವರಿಗೆಲ್ಲ ಮನದಟ್ಟು ಮಾಡಲು ಆತ ಮಾತಾಡಬೇಕು, ಭಾಷಣ ಮಾಡಬೇಕು, ಪ್ರಚಾರ ಸಾಹಿತ್ಯ ರಚಿಸಬೇಕು. ಅವನು ತನ್ನ ಮಾತು, ಭಾಷಣಗಳಲ್ಲಿ ಭಾವಾವೇಶ ತೋರಿಸಬಹುದು. ಓದುಬರಹ ಬಾರದ ಕೇಳುಗರನ್ನು ಮುಟ್ಟಲು ಆವೇಶ ಅಗತ್ಯವೂ ಹೌದು. ಕ್ರಾಂತಿ ಮಾರ್ಗದಲ್ಲಿ ಅದು ಅನಿವಾರ್ಯ. ಆದರೆ ಅವನು ರಚಿಸುವ ಪ್ರಚಾರ ಸಾಹಿತ್ಯ ಭಾವಾವೇಶಕ್ಕೆ ತುತ್ತಾಗದ ವಿಚಾರ ಸಾಹಿತ್ಯ ಆಗಬೇಕು. ರಸಾನಂದವನ್ನು, ಆ ಮೂಲಕ ಮೌಲ್ಯ ಪ್ರಜ್ಞೆಯನ್ನು ಉಂಟು ಮಾಡುವ ಸಾಹಿತ್ಯ ವಿಚಾರ ಸಾಹಿತ್ಯಕ್ಕಿಂತ ಭಿನ್ನವಾದುದು. ಇದೀಗ ಬದುಕಿನಲ್ಲಲ್ಲ, ಸಾಹಿತ್ಯ ಜೀವನದಲ್ಲಿ ಸೋತ ಕೆಲವರು ವೈಯಕ್ತಿಕವಾದ ತಮ್ಮ ಪ್ರತಿಷ್ಠೆಯನ್ನು ಮೆರೆಯಲೆಂದು ಕಾವ್ಯಾದಿ ಸಾಹಿತ್ಯಕ್ಕೂ ಪ್ರಚಾರಾದಿ ವಿಚಾರ ಸಾಹಿತ್ಯಕ್ಕೂ ಇರುವ ಮೂಲಭೂತವಾದ ಭೇದವನ್ನು ಮರೆಮಾಚಿ; ಸಾಹಿತ್ಯದ ಸ್ವರೂಪದಲ್ಲಲ್ಲ, ಕೇವಲ ಧೋರಣೆಯಲ್ಲಿ ಮಾತ್ರ ಕ್ರಾಂತಿಕಾರೀ ಘೋಷಣೆ

ಗಳನ್ನು ರೂಪಿಸಿ, ಆ ಮೂಲಕ ಸಮಾಜದಲ್ಲಿ ಕ್ರಾಂತಿಯನ್ನುಂಟು ಮಾಡುತ್ತೇವೆ ಎಂಬ ಮಾತುಗಳನ್ನಾಡುತ್ತಿದ್ದಾರೆ.

ಲೇಖನಿಯಿಂದ ಕೆಲವರ ಮನಸ್ಸನ್ನು ನೋಯಿಸಬಹುದು, ಬುದ್ಧಿಯನ್ನು ಮುಟ್ಟಬಹುದು. ಆದರೆ ಹಲವರ ನೋವನ್ನು ನಿವಾರಿಸಬೇಕಾದಲ್ಲಿ, ಅವರ ಮನಸ್ಸನ್ನು ತಟ್ಟಬೇಕಾದಲ್ಲಿ ಸಾಹಿತಿ, ಲೇಖನಿಯನ್ನು ಬದಿಗಿಟ್ಟು, ಕ್ರಾಂತಿಕಾರಿಯಾಗಿ ನಾಲಗೆಯನ್ನುಪಯೋಗಿಸಬೇಕು. ಓದುಬಾರದ ಹಲವರಿಗೆ ಅಂಟಿಕೊಂಡಿರುವ ರೋಗ ಯಾವುದೆಂಬುದನ್ನು ಮಾತಿನ ಮೂಲಕ ಅವರಿಗೆ ಮನದಟ್ಟು ಮಾಡಬೇಕು. ಅವರ ಜತೆ ಕೂತು ಚರ್ಚಿಸಿ, ನಿವಾರಣೋಪಾಯ ಕಂಡುಹಿಡಿಯಬೇಕು. ಅಥವಾ, ನಿವಾರಣೋಪಾಯ ಗೊತ್ತಿದ್ದಲ್ಲಿ, ಅವರನ್ನು ಹುರಿದುಂಬಿಸಿ ದಂಗೆಯೇಳುವಂತೆ ಮಾಡಬೇಕು.

ಆದರೆ ಈಗ ಸಾಹಿತ್ಯ ಕ್ಷೇತ್ರದಲ್ಲಿ ಎದ್ದಿರುವ ಹುಯಿಲು ಹಲವರ ಕಾರಣಕ್ಕಾಗಿ ಹುಟ್ಟಿದ್ದಲ್ಲ; ಕೆಲವರ ಸ್ವಾರ್ಥಕ್ಕಾಗಿ ಮಾತ್ರ. ಹುಯಿಲೆಬ್ಬಿಸಿರುವ ಸಾಹಿತಿಗಳಿಗೆ ಜನತೆಯ ಕಾರ್ಯಕ್ಷೇತ್ರ ಬೇಕಾಗಿಲ್ಲ. ಲೇಖನಿ ಬಿಟ್ಟು ಬದುಕುವ, ಬದುಕನ್ನೆದುರಿಸುವ ಛಲ ಅವರಿಗಿಲ್ಲ.

ಮನುಷ್ಯ ಹುಟ್ಟಾ ಮೃಗ. ಮಾನವೀಯತೆ ಅವನು ರೂಢಿಸಿಕೊಂಡ, ಆದ್ದರಿಂದ ಕೃತಕವಾದ, ಆದರೂ ಸಮಾಜ ಜೀವನಕ್ಕೆ ಅಗತ್ಯವಾದ ಒಂದು ಸಂಸ್ಕಾರ. ಸಮಾಜ ಜೀವನದ ಸೌಲಭ್ಯಗಳು ಬೇಕಾದರೆ ಅವನು, ಆ ಸಂಸ್ಕಾರಜನ್ಯವಾದ ವಿವಿಧ ಮೌಲ್ಯಗಳಿಗೆ ಬದ್ಧನಾಗಿರಬೇಕು. ಈ ದಾರಿಯಲ್ಲಿ ಹೇಗೋ ಹುಟ್ಟಿದ ಮಾನವೀಯ ಮೌಲ್ಯ ಧರ್ಮವಾಗಿ, ಧರ್ಮ ಜಾತಿಯಾಗಿ, ಜಾತಿ ಅಸಮಾನತೆಗೆ ಎಡೆಮಾಡಿಕೊಟ್ಟದ್ದು ನಿಜ. ಜಾತಿ, ಬೇರೆ ಬೇರೆ ಗುಂಪುಗಳನ್ನು ವಿವಿಧ ಸಾಂದ್ರತೆಯುಳ್ಳ ದ್ರವಗಳಂತೆ ಬೇರೆ ಬೇರೆಯಾಗಿಟ್ಟದ್ದೂ ಹೌದು. ಆದರೆ ಯಾವುದೇ ಒಂದು ಜಾತಿ ವಿಷವಾಗಿ ಮಿಕ್ಕೆಲ್ಲ ಜಾತಿಯ ಹಾಲನ್ನಾವರಿಸಿ ಹಾಳು ಮಾಡಿದೆ ಎಂಬುದು ಅತಿರೇಕದ ಮಾತು.

ಆಳಬೇಕೆಂಬ ಆಕಾಂಕ್ಷೆ ಬಲಿತ ಸ್ವಾರ್ಥ ರಾಜಕಾರಣಿ, ಜಾತಿಯ ಬೇರುಗಳನ್ನು ಬಲಪಡಿಸಿ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಲೇ ಬಂದ. ಇದೀಗ ಸಾಹಿತಿ ಕೂಡ, ಆ ಬೇರಿಗೆ ನೀರೆರೆದು ಗೊಬ್ಬರ ಹಾಕತೊಡಗಿರುವುದು ಸಮಾಜ ಘಾತುಕ ಕೃತ್ಯವೇ ಸರಿ. ಇದರ ಪರಿಣಾಮ ಅಂಥ ಸಾಹಿತಿ ಕೇವಲ ರಾಜಕಾರಣಿಯಾಗುವುದು, ಸಮಾಜದ ಸ್ವಾಸ್ಥ್ಯ ಮತ್ತೂ ಮತ್ತೂ ಕೆಡುವುದು ಮಾತ್ರ. —

ಕನ್ನಡ ಸೂಕ್ತಿ ಸಂಹಿತೆ

ಋಣಾನುಬಂಧ

ದನಗಳು ಹೆಂಡತಿ ಮಗುಯೆಂಬಿವು ಹಿಂದಿನ
ಜನ್ಮದ ಋಣದಂತೆ

ನಿಷ್ಕಾಮ ಕರ್ಮ

ಕರ್ಮದಲ್ಲಿಯೆ ನಿನಗೆ ಅಧಿಕಾರ ನೋಡ
ಫಲದೊಳೆಂದೂ ಬಯಕೆ ಮಾಡಬೇಡ

ಗುಟ್ಟನ್ನು ರಟ್ಟು ಮಾಡಬೇಡಿ!

— ಬಿ. ಸುಬ್ರಾಯ ಅಡಿಗ

ಮಗು ಮೊದಲು ಸುತ್ತಲೂ ಕಸಕಡ್ಡಿಗಳನ್ನೆಸೆದು ಕ್ಷಮಾಶೀಲ ಮಾತೆ ಮಂದಹಾಸದೊಂದಿಗೆ ಅದನ್ನು ಸ್ವಚ್ಛಗೊಳಿಸಲೆಂದು ಹಾರೈಸುತ್ತದೆ. ಅದೇ ರೀತಿ ವಯಸ್ಕನು ಯಾವುದಾದರೂ ಕೆಟ್ಟ ಸಂಗತಿಯನ್ನು ತನ್ನ ಆಪ್ತಮಿತ್ರನ ಕಿವಿಗೆ ಹಾಕಿ, ತನ್ನ ಬಗ್ಗೆ ಅವನ ವ್ಯವಹಾರ ಮೊದಲಿನಂತೆಯೇ ಇರಲೆಂದು ಬಯಸುತ್ತಾನೆ. ಆ ಸಣ್ಣ ಮಗುವಿನಂತಹದೇ ತಿಳಿಗೇಡಿತನದ ವರ್ತನೆ ಇವನದು.

ನಮ್ಮಲ್ಲಿ ಪ್ರತಿಯೋರ್ವನೂ ತನ್ನ ತಾರುಣ್ಯದಲ್ಲಿ ಯಾವಳಾದರೂ ಆದರ್ಶ ತರುಣಿಯ ಕನಸು ಕಂಡಿರಬಹುದು. ಆಕೆ ಸರ್ವಗುಣಸಂಪನ್ನಳಾಗಿರಬೇಕೆಂದು ಹಾರೈಸಿರಬಹುದು. ತನ್ನೆಲ್ಲ ವಿಚಾರಗಳನ್ನು ಆಕೆ ಗಮನ ಕೊಟ್ಟು ಕೇಳುತ್ತಿರಬೇಕೆಂದೂ ಬಯಸುವ. ಈ ಉತ್ಸಾಹದಲ್ಲಿ ಆ ಪ್ರೇಯಸಿಗೆ ಆತ ತನ್ನ ಕೆಟ್ಟ ಗುಣಗಳನ್ನು ಹೇಳಿ ಅವಳ ಸಹಾನುಭೂತಿಗಾಗಿ ಕಾತರಪಡುವ.

ಅದೇ ವೇಳೆ ಆಕೆಯ ಗತಜೀವನದ ಕಟು ಸತ್ಯವನ್ನು ಅರಿಯುವ ಸಾಹಸ ಅವನಿಗಿರುವುದಿಲ್ಲ. ತನ್ನ ಮಾತುಗಳನ್ನು ತಾಳ್ಮೆಯಿಂದ ಕೇಳಬೇಕೆಂದು ಬಯಸುವ ಅವನೇ ಅವಳ ವಿಷಯವಾಗಿ ತಿಳಿಯಲು ಸಾಹಸ ಪಡಲಾರ. ಈ ರೀತಿಯ ಆತ್ಮಾಭಿವ್ಯಕ್ತಿಯು ಇಚ್ಛೆ ಪೂರ್ತಿ ಸ್ವಾರ್ಥಮಯವಾದುದು.

ಇಬ್ಬರ ನಡುವೆ ಆತ್ಮೀಯತೆ ಇರುವುದೇನೋ ಒಳ್ಳೆಯದೇ. ಆದರೆ ಅದಕ್ಕೂ ಒಂದು ಮಿತಿ ಬೇಕು. ಈ ಮಿತಿಯನ್ನು ಮೀರಿದಾಗ ಅದು ಅಪಾಯಕರ ಎನಿಸುವುದು. ತಮ್ಮ ಭಾರವನ್ನು ಇತರರ ಮೇಲೆ ಹಾಕುವುದಕ್ಕಾಗಿಯೇ ಈ ರೀತಿ ಮಾಡಲಾಗುತ್ತದೆ. ಕೆಲ ಸಂಗತಿಗಳು ನಿಮ್ಮ ಮನಸ್ಸನ್ನು ನಿರಂತರ ಕಲಕುತ್ತಿವೆಯೆಂದಾದರೆ ಅವು ಇತರರಿಗೂ ತೊಂದರೆ ಕೊಡಲಾರವೆಂದು ಅದೆಂತು ಭಾವಿಸುವಿರಿ? ನಿಮ್ಮ ಮನಸ್ಸಿನ ಉದ್ವೇಗವನ್ನು ಇತರರ ಮೇಲೆ ಹೇರಲು ನಿಮಗೇನು ಅಧಿಕಾರ?

ಯಾವ ವ್ಯಕ್ತಿಯಾದರೂ ಇತರರೊಡನೆ ಅನೈತಿಕ ಸಂಪರ್ಕ ಇಟ್ಟುಕೊಂಡರೆ, ಆ ವ್ಯಕ್ತಿ ಒಂದು ರೀತಿಯ ಹೆಚ್ಚಿನ ಪಾಪಭಾರದಿಂದ ಒತ್ತಲ್ಪಡುತ್ತಾನೆ. ತಮ್ಮ ಹೆಂಡತಿಯರಿಗೆ ತಮ್ಮ ಪಾಪದ ಸುಳಿವು ಇತರರ ಮೂಲಕ ತಿಳಿಯದಿರಲೆಂಬ ಇಚ್ಛೆಯಿಂದ ಕೆಲವರು ಸ್ವತಃ ಅವರಿಗೆ ಈ ವಿಷಯವನ್ನು ಹೇಳಿಬಿಡುವುದುಂಟು. ಆ ಬಳಿಕ ಪತ್ನಿಯರು ತಮ್ಮನ್ನು ಕ್ಷಮಿಸಿಬಿಡಬೇಕೆಂದೂ ಆಶಿಸುವರು. ಈ ರೀತಿ ಅವರೇನೋ ತಮ್ಮ ಪಾಪದ ವಿಚಾರ ತಿಳಿಸಿ ಹೊರೆ ಇಳಿಸಿಕೊಂಡರೂ ಅದು ಹೆಂಗೆಳೆಯರ ತಲೆಯೇರಿ ಕುಳಿತು ಅವರ ಚಡಪಡಿಕೆಗೆ ಕಾರಣವಾಗುತ್ತದೆ.

ಹುಡುಗಿಯೊಬ್ಬಳು 20 ವರ್ಷ ಪ್ರಾಯದ ಬಳಿಕ ಏಜಂಟನೊಬ್ಬನನ್ನು ವಿವಾಹವಾದಳು. ಬಹುಕಾಲದವರೆಗೆ ಅವರ ವೈವಾಹಿಕ ಜೀವನ ಸುಗಮವಾಗಿ ಸಾಗಿತು. ಮುಂದೊಂದು ದಿನ ಪತಿ ಪತ್ನಿಯೆದುರು ತನ್ನ ಗತಜೀವನದ ಘಟನೆಯೊಂದನ್ನಿಟ್ಟ. ಒಮ್ಮೆ ತಾನು ವ್ಯಾಪಾರಕ್ಕಾಗಿ ಹೋಗಿದ್ದಾಗ ಹುಡುಗಿಯೊಬ್ಬಳೊಡನೆ ಸಂಪರ್ಕ ಬೆಳೆಸಿದನೆಂದೂ ಮುಂದೆ ತಾನು ಹಾಗೆ ಮಾಡುವುದಿಲ್ಲವೆಂದೂ ಹೇಳಿದ. ಈ ರೀತಿ ಹೃದಯ ಬಿಚ್ಚಿ ಹೇಳಿದ ಮೇಲೆ ತಮ್ಮಿಬ್ಬರ ಸಂಬಂಧವೂ ಗಾಢವಾಗುವುದೆಂದು ಆತ

ಭಾವಿಸಿದ್ದ. ಆದರೆ ಪರಿಣಾಮ ವಿರುದ್ಧವಾಯಿತು. ಅವರಿಬ್ಬರ ಅನ್ಯೋನ್ಯ ಪ್ರೇಮಕ್ಕೆ ಬೆಂಕಿ ಬಿತ್ತು. ಪತ್ನಿ ದಿನದಿನಕ್ಕೂ ಸಂಶಯಮನೋವೃತ್ತಿಯವಳಾಗುತ್ತಾ ಹೋದಳು. ವ್ಯಾಪಾರದ ವೇಳೆ ತನ್ನ ಪತಿಯ ಸಂಪರ್ಕಕ್ಕೆ ಬರುವ ತರುಣಿಯರನ್ನು ಅವಳು ಎಚ್ಚರಿಕೆಯಿಂದ ಗಮನಿಸುತ್ತಿದ್ದಳು. ಪತಿ ವ್ಯಾಪಾರಕ್ಕಾಗಿ ಪರವೂರಿಗೆ ಹೋದಾಗೆಲ್ಲ ಚಡಪಡಿಕೆ ಹೆಚ್ಚುತ್ತಿತ್ತು. ಪತಿಮಹಾಶಯ ತನ್ನ ತಪ್ಪೊಪ್ಪಿಕೊಂಡು ಮಾನಸಿಕ ಉದ್ವೇಗದ ಭಾರ ಇಳಿಸಿಕೊಂಡ. ಆದರೆ ಪತ್ನಿಯ ಮನಃಶಾಂತಿ ಮಾತ್ರ ಪೂರ್ತಿ ಹಾಳಾಯಿತು.

ನಾವು ನಮ್ಮ ಗುಟ್ಟನ್ನು ನಮ್ಮ ಅತಿ ಆತ್ಮೀಯರಿಗಷ್ಟೇ ಏಕೆ ಹೇಳುತ್ತೇವೆ- ಎಂಬ ಪ್ರಶ್ನೆ ಉದಿಸುತ್ತದೆ. ಈ ವಿಧದಿಂದ ನಾವು ಅವರಿಗೆ ಇನ್ನಷ್ಟು ಹತ್ತಿರವಾಗಲು ಬಯಸುವೆವೆ ? ತನ್ನ ಹೆಂಡತಿಯೆದುರು ತಪ್ಪೊಪ್ಪಿಕೊಂಡ ಆ ಪತಿಮಹಾಶಯನ ವರ್ತನೆ "ಪ್ರೇಮ"ವಂತೂ ಅಲ್ಲವೇ ಅಲ್ಲ. ಇದರಲ್ಲಿ ಒಂದು ವಿಧವಾದ ಪರೀಕ್ಷಾಮನೋಭಾವ ಹುದುಗಿದೆ ನನ್ನ ಬಗ್ಗೆ ನಿನ್ನಲ್ಲಿ ಎಷ್ಟೊಂದು ಪ್ರೇಮವಿದೆಯೆಂಬುದನ್ನು ಪರೀಕ್ಷಿಸಬಯಸುತ್ತೇನೆ. ನನ್ನ ಜೀವನದ ಪಾಪಕೃತ್ಯವನ್ನು ಅರಿತ ಮೇಲೂ ನೀನು ನನ್ನನ್ನು ಪ್ರೀತಿಸುವಿಯೋ ಇಲ್ಲವೋ ನೋಡಬೇಕಾಗಿದೆ.'— ಎಂಬ ಆಹ್ವಾನವಿದು.

ಆ ಮನುಷ್ಯನ ವರ್ತನೆ ಸರಿಯಿಲ್ಲ. ತನ್ನ ಮನಸ್ಸಿನ ಚಡಪಡಿಕೆಯನ್ನು ಪತ್ನಿಯ ಮೇಲೆ ಹಾಕುವ ಅಧಿಕಾರ ಅವನಿಗಿಲ್ಲ

ಹೆಂಗಸು ತನ್ನ ಗುಟ್ಟನ್ನು ಅಡಗಿಸಿಡಲಾರಳೆಂಬ ಹೇಳಿಕೆ ಸರ್ವಸಾಧಾರಣವಾದದು. ಆದರೆ ಇದು ತಪ್ಪೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಗುಟ್ಟನ್ನಡಗಿಸವುದಕ್ಕೂ ಸಂಬಂಧವಿಲ್ಲವೆಂದು ಸ್ತ್ರೀತ್ವಕ್ಕೂ ಮನೋವಿಜ್ಞಾನಿಗಳು ಪರೀಕ್ಷಣೆಗಳಿಂದ ಸಿದ್ಧಪಡಿದ್ದಾರೆ. ಮೊತ್ತಮೊದಲು ಹುಟ್ಟಿದ ಮಗು ರಹಸ್ಯವನ್ನು ಕಾಯ್ದಿಡಬಲ್ಲುದೆಂದೂ ಆ ಬಳಿಕ ಹುಟ್ಟುವ ಮಕ್ಕಳು ಹಾಗೆ ಮಾಡಲಾರವೆಂದೂ ಪ್ರಯೋಗಗಳಿಂದ ತಿಳಿದು ಬಂದಿದೆ.

ಇಬ್ಬರು ಆಪ್ತ ಮಿತ್ರರ ನಡುವೆ ಇರುವ ಅತ್ಯಧಿಕ ಆತ್ಮೀಯತೆಯೂ ಕೆಲವೊಮ್ಮೆ ತೊಂದರೆಗೆ ಎಡೆ ಕೊಡುವುದುಂಟು. ಮಿತ್ರರ ಬಗ್ಗೆ ಪ್ರಾಮಾಣಿರಾಗಿದ್ದು ನಮ್ಮ ಸುಖ ದುಃಖಗಳನ್ನು ಅವರೊಡನೆ ಹಂಚಿಕೊಳ್ಳಬೇಕೆಂದೇ ಎಲ್ಲರೂ ಬಯಸುತ್ತಾರೆ. ಆದರೆ ಇದಕ್ಕೂ ಒಂದು ಮಿತಿ ಅಗತ್ಯ. ಏಕೆಂದರೆ ಇಬ್ಬರು ಮಿತ್ರರು ಪರಸ್ಪರ ಅಗತ್ಯಕ್ಕಿಂತ ಹೆಚ್ಚು ತಿಳಿದುಕೊಂಡರೆ ಅವರಿಂದ ಚೇತನ ಇಲ್ಲವೇ ಅವಚೇತನ ಮನದಲ್ಲಿ ಅಪರಾಧ ಭಾವನೆ ತಲೆಯೆತ್ತುತ್ತದೆ. ಗೆಳೆತನದಲ್ಲಿ ಅತಿ ಹೆಚ್ಚಿನ ಆತ್ಮೀಯತೆ ಆ ಗೆಳೆತನದ ಮೂಲಕ್ಕೇ ಕೊಡಲಿಯೇಟು ಹಾಕುತ್ತದೆಂಬ ಕಟು ಸತ್ಯವನ್ನು ನಾವು ಮರೆಯಬಾರದು.

ಆತ್ಮೀಯತೆಯ ಪರಿಧಿಯನ್ನು ದಾಟಿದ ಬಳಿಕ ನಾವು ನಮ್ಮ ಗೆಳೆಯರ ನಡೆ ನುಡಿಗಳಲ್ಲಿನ ತಪ್ಪುಗಳನ್ನು ಹೆಕ್ಕತೊಡಗುತ್ತೇವೆ. ಆಗಲೇ ಗೆಳೆತನದ ಕೊಲೆಯಾಗುತ್ತದೆ.

ಹಾಗಿದ್ದರೆ ನಮ್ಮ ಗುಟ್ಟನ್ನು ಬಯಲು ಮಾಡುವುದು ತಪ್ಪೆ ? ಕೆಲ ರಹಸ್ಯಗಳನ್ನು ಅನಿಶ್ಚಿತ ಕಾಲದವರೆಗೆ ಮನದಲ್ಲೇ ಇರಿಸಿಕೊಂಡರೆ ಅದರಿಂದ ಮನೋರೋಗ ಉಂಟಾಗುವುದೆಂದು ಮನೋವಿಜ್ಞಾನ ಸಿದ್ಧಪಡಿಸಿಲ್ಲವೇ ? ಇದೇನೋ ನಿಜವಾದರೂ ನಾವು ಎಂತಹ ರಹಸ್ಯವನ್ನು ಯಾರಿಗೆ ಹೇಳಬೇಕೆಂಬುದರ ಬಗ್ಗೆ ವಿಚಾರ ಮಾಡಬೇಕು. ರಹಸ್ಯವನ್ನು ಇತರರಿಗೆ ತಿಳಿಸಿ ಅವರ ಮನಃಶಾಂತಿ ಕೆಡಿಸುತ್ತೆವೆಯೋ ಎಂದು ಯೋಚಿಸಬೇಕು. ನಿಮ್ಮ ಮಾತು ಹೇಳಿರಿ. ಆದರೆ ಇತರರ ಮೇಲೆ ಅದು ದುಷ್ಪ್ರಭಾವ ಬೀರದಂತೆ ಎಚ್ಚರಿಕೆ ವಹಿಸಿರಿ.

ಈ ಕಲೆಯನ್ನರಿತವರು ಬಲು ಕಡಿಮೆ. ಸಮಾಜದಲ್ಲಿ ಯೋಗ್ಯರೀತಿಯಿಂದ ಬಾಳುವ ಕಲೆಯಿದು. ಯಾವ ರಹಸ್ಯವನ್ನು ಯಾರಿಗೆ ಯಾವ ಸಂದರ್ಭದಲ್ಲಿ ತಿಳಿಸಬೇಕೆಂಬುದನ್ನು ಬಲ್ಲವನೇ ಬದುಕಿನಲ್ಲಿ ಸಾಫಲ್ಯ ಪಡೆಯುತ್ತಾನೆ.

ನಾವು ನಮ್ಮ ರಹಸ್ಯವನ್ನು ಗುಟ್ಟಾಗಿ ಇಡಬಯಸುತ್ತೇವೆಂಬುದೂ ಮನೋವೈಜ್ಞಾನಿಕ ಸತ್ಯವೇ. ಕೆಲವೊಮ್ಮೆ ಇದು ನಮ್ಮ ಮೇಲೆ ಅಸಹನೀಯ ಭಾರ ಹಾಕುವುದುಂಟು. ಒಂದೊಂದನ್ನು ಪ್ರಕಟಿಸಬೇಕೆ ? ಅಥವಾ ಪೂರ್ತಿ ಮೌನತಳೆಯಬೇಕೆ ?— ಎಂಬ ಪರಿಸ್ಥಿತಿ ಒದಗುತ್ತದೆ. ಅಂಥ ವೇಳೆ ನಾವೇನು ಮಾಡಬೇಕೆಂದು ನಿರ್ಣಯಿಸಬೇಕಾದುದೇ ಮಹತ್ವದ ಸಂಗತಿ.

ಸಿಟ್ಟು ಪಶ್ಚಾತ್ತಾಪ, ಸೇಡು — ಮೊದಲಾದ ಭಾವನೆಗಳು ನಮ್ಮ ನಿರ್ಣಯಗಳಿಗೆ ಅಡ್ಡ ಬರುತ್ತವೆ. ಇವುಗಳನ್ನು ತಪ್ಪಿಸಿಕೊಳ್ಳಬೇಕು. ಭಾವನೆಯನ್ನು ಪ್ರಕಟಪಡಿಸುವುದು ತಾತ್ಕಾಲಿಕವಾಗಿ ನಮ್ಮ ತಲೆಭಾರ ಇಳಿಸುವುದಾದರೂ ಕಾಲ ಕಳೆದಂತೆ ನಮಗೆ ಸ್ಥಾಯಿಯಾಗಿ ತಲೆನೋವು ಉಂಟುಮಾಡಬಲ್ಲದು.

ನೀವು ಮಾನಸಿಕವಾಗಿ ಸ್ವಸ್ಥರಾಗಿಲ್ಲವೆಂದು ಅನ್ನಿಸಿದಾಗೆಲ್ಲ ನಿಮ್ಮ ತುಟಿಗಳನ್ನು ಗಟ್ಟಿಯಾಗಿ ಬಿಗಿಹಿಡಿಯಿರಿ. "ನಿಮ್ಮ ಹಿಡಿತದಲ್ಲಿರುವವರೆಗೆ ರಹಸ್ಯ ನಿಮ್ಮ ಗುಲಾಮನಾಗಿ ಇರಬಲ್ಲದು. ಅದು ಬಯಲಾಗುತ್ತಲೇ ನೀವು ಅದರ ಗುಲಾಮರಾಗಿರಬೇಕಾಗುವುದು ! —" ಎಂಬುದು ಪ್ರಖ್ಯಾತ ಅರಬೀ ಗಾದೆ. ಅದೇ ರೀತಿ 'ಕಾದಿಟ್ಟ ರಹಸ್ಯದ ಬೆಲೆ ಒಂದು ಕೋಟಿ ರೂಪಾಯಿ. ಅದು ಕೈ ತಪ್ಪಿತೆಂದರೆ ಒಂದು ಹುಲ್ಲು ಕಡ್ಡಿಗಿಂತಲೂ ಕೀಳಾಗುವುದು' ಎಂಬುದು ನಮಲ್ಲಿ ವಾಡಿಕೆಯಿರುವ ಮಾತು.

ಇತರರ ರಹಸ್ಯಗಳನ್ನು ನೀವಾಗಿ ಅರಿಯಲು ಹೋಗಬೇಡಿರಿ. ಅಂತೆಯೇ ನಿಮ್ಮ ರಹಸ್ಯವನ್ನು ಇತರರಿಗೆ ತಿಳಿಯದಂತೆ ಜಾಗೃತರಾಗಿರಿ. ಭಾವುಕತೆಗೆ ಬಲಿಬಿದ್ದು ನಿಮ್ಮ ಗುಟ್ಟನ್ನು ಇತರರಿಗೆ ಬಯಲು ಮಾಡಿದಿರೆಂದರೆ ಅನರ್ಥವಾಗಲೂಬಹುದು. ನಿಮ್ಮ ಅತಿ ಹತ್ತಿರದ ವ್ಯಕ್ತಿಯೇ ಮನಃಶಾಂತಿ ಕಳೆದುಕೊಳ್ಳಬಹುದು. 'ಆತ್ಮಾಭಿವ್ಯಕ್ತಿ ಆತ್ಮಕ್ಕೇನೋ ಹಿತಕರವೇ. ಆದರೆ ಗೌರವಕ್ಕೆ ಗಂಡಾಂತರಕಾರಿಯೂ ಆದೀತು" ಎಂದು ಮಾರ್ಕ್ ಟ್ವೇನ್ ನುಡಿದಿದ್ದಾರೆ.

ಇತರರಿಗೆ ನಮ್ಮ ರಹಸ್ಯ ಹೇಳುವುದಷ್ಟೇ ಹಾನಿಕರವಿಲ್ಲ- ಇತರರ ರಹಸ್ಯ ಕೇಳುವುದೂ ದುಷ್ಪ್ರ ಹಾನಿಕರವೇ. ಆದರಿಂದ ಅವರ ಮನಸ್ಸಿನ ಮೇಲೂ ದುಷ್ಟ ಭಾವ ಉಂಟಾಗಬಹುದು. "ಓಹ್ ! ಎಂಥ ನೀಚನಿವನು. ಇವನ ಗೆಳೆತನದಿಂದ ಹಾನಿಯೂ ಒದಗಿತು. ಎಂಬ ಮನೋಭಾವ ಅವರಲ್ಲಿ ಮೂಡಬಹುದು.

ಈ ರೀತಿ ರಹಸ್ಯಗಳನ್ನು ಗುಟ್ಟಾಗಿಡುವುದೇ ಕ್ಷೇಮ. ಯಾರಿಗೂ ತೊಂದರೆಯಾಗದ ರಹಸ್ಯಗಳನ್ನು ಬಯಲು ಮಾಡಿ ಶಾಶ್ವತ ಅಶಾಂತಿ ಪಡೆದುಕೊಳ್ಳುವುದರಲ್ಲಿ ಏನರ್ಥ ? ಇಂಥ ಅವಿವೇಕದ ವರ್ತನೆಗೆ ನೀವೆಂದೂ ಕೈಹಾಕಬೇಡಿರಿ. ——

(ಹಿಂದಿಯಿಂದ)

ಕನ್ನಡ ಸೂಕ್ತಿ ಸಂಹಿತೆ

ವಿದ್ಯೆ

ಕಲ್ಪಲತೆಯ ತೆರದಿ ವಿದ್ಯೆ ಏನು ಏನು ನೀಡದು ?

ಕುಲದ ಏಳ್ಗೆ

ಯಾರ ಹುಟ್ಟನಿಂದ ಕುಲದ ಏಳ್ಗೆಯವನೆ ಧನ್ಯನು.

ಕಾವ್ಯ ವಾಹಿನಿ



ಪ್ರಾರ್ಥನೆ

—"ಪುಲಿಕೇಶಿ"

ಬ್ರಹ್ಮವನ ವಿಹಾರಿ। ಗುರುದೇವ ನೀ
ಜನ್ಮ ಜಾಡ್ಯ ನಿವಾರಿ ॥ಪ॥

ಪರಮ ಕರುಣಾಕರನೆ
ಶರಣು ಬಂದಿಹೆ ನಿನಗೆ
ತರಳನನು ಕನಿಕರಿಸಿ
'ಪರಿಭವ'ವ ಕಡಿಸು ವಿಭು ॥

ದಯೆಗೆ 'ನಿರವಧಿ' ನೀನೆ
ಭಯ ವಿದೂರನೆ ಸುಗುಣಿ
ನಯಶಾಲಿಗಳ ಅರಸ
ಜಯವಾಗಲೆನ್ನೊಪ್ಪೆ ॥

ಲೌಕಿಕಾಕರ್ಷಣಕೆ
ಮೂಕಾಂಧ ಬಧಿರನಂ
ಜೋಕೆಯಿಂದಾಗಿಸುತೆ
ಸಾಕು ಮಾಡೈ ಭವವ ॥

ದಿವ ರಾತ್ರಿ ನಿನ ಕನಸು
'ಕವಿಹೃದಯ' ಕೂಗುತಿದೆ
ಭವತಿಮಿರ ಭಾಸ್ಕರನೆ
ಶಿವಕುವರ ಮನದಾಣ್ಮ ॥

—

ಸೃಷ್ಟಿ ಗ್ರಂಥ

—ಜಿ. ಪಿ. ದೈವಜ್ಞಾಚಾರ್ಯ

ವಿಶ್ವದ ಗ್ರಂಥಾಲಯದೊಳಗೆಲ್ಲಿಯು
ಒಶ್ವದ ಅಪೂರ್ವ ಗ್ರಂಥವಿದು
ಸಜೀವ ಸಚಿತ್ರ; ಚೇತನಚೇತನ
ರೂಪದ ಅಗಣಿತ ಪುಟಗಳದು

ಅಕ್ಷರನಕ್ಷರ ಯಾರಾದರು ಸರಿ
ಎಲ್ಲರು ಇದನೋದಲು ಬಹುದು
ಜೀವನದಲ್ಪಾವಧಿಯಲಿ ಸಮಸ್ತ
ಗ್ರಂಥವನೋದಲಸಾಧ್ಯವದು

ಓದಿದುದಷ್ಟನೆ ಅರಿತೋದಲು ತಾ
ದೊರೆಯುವದೀ ಗ್ರಂಥದ ಸಾರ
ಬರಿಪುಟತಿರುಲ್ ಏನಿದೆ? ಅಂದವ-
ಗಿದು ಪಶುವಸತಿಯು ಕಾಂತಾರ

ಬಗೆಯನು ಭೇದಿಸಿ ಸಾರವನರಿತರೆ
ಗ್ರಂಥದ ಕವಿಗಳ ಬಹುತೀರ
ಏನಿದೆ? ಎಂಬುವ ಪಶುವಿಗೆ ತೋರುವ-
ನವ, ಕವಿ ಇರುವನು ಸಾಕಾರ

ಪುಟ ಪುಟದಲಿ ಸ್ಫುಟಗೊಳಿಸುವನಾ ಕವಿ
ತನ್ನಿರುವಿನ ಬಗೆಯನು ಬರೆದು
ಓದುಗನನು ಸಹ ಗ್ರಂಥದೊಳಡಗಿಸಿ
ಕೊಡುವನು ಗ್ರಂಥವ ಪುಟ ತೆರೆದು

ಪುಟ ತೆರೆದಿರುವೀ ಗ್ರಂಥವೆ ಸೃಷ್ಟಿಯು
ದೃಷ್ಟಿಸಿದಂತುದು ತೋರುವದು
ವಿಶ್ವವು ರಚಿಸಿಹ, ರಚಿಸುವ ಗ್ರಂಥಗ-
ಳೆಲ್ಲಕು ಸೃಷ್ಟಿಯು ಅಂಶಿಯಿದು —

ಒಂದು ಘನವಾದ ಪಾಠ.

ಎಚ್. ಎಲ್. ರಾಮಸ್ವಾಮಿ, ಎಂ. ಎ.

ಒಂದು ವಿಶ್ವವಿದ್ಯಾಲಯ. ಅಲ್ಲಿ ವ್ಯಾಸಂಗ ಮಾಡುತ್ತಿದ್ದ ಒಬ್ಬ ಯುವಕ ವಿದ್ಯಾರ್ಥಿ. ಈತ ಒಂದು ಸಂಜೆ, ಕರುಣಾಳುವೂ, ಶಿಷ್ಯರ ಮೆಚ್ಚಿಗೆ ಪಾತ್ರನೂ ಆಗಿದ್ದ ಪ್ರಾಧ್ಯಾಪಕರೂಡನೆ, ಗಾಳಿ ಸಂಚಾರ ಹೊರಟ. ಇಂತಹ ಸಮಯದಲ್ಲೆ, ವಿದ್ಯಾರ್ಥಿಗಳು, ಅನೇಕ ರೀತಿಯ ಹಿತಬೋಧನೆ ಪಡೆಯುತ್ತಿದ್ದರು ಆತನಿಂದ. ಹೀಗೆ ಹೋಗುತ್ತಿರಲು ಹತ್ತಿರ ಹೊಲದ ಬದಿಯಲ್ಲಿ ಒಂದು ಜೊತೆ ಜೋಡು ಕಾಣಿಸಿತು. ಯಾವನೋ ಬಡಕೂಲಿಯವನು ಅವುಗಳನ್ನು ಅಲ್ಲಿ ಬಿಟ್ಟು ಹೋಗಿದ್ದು, ಕೆಲಸ ಮುಗಿಯುವ ವೇಳೆಯಾಗಿದ್ದರಿಂದ ಬಂದು ಮೆಟ್ಟಿಕೊಂಡು ಹೋಗುವ ಸಮಯ-ವಾಗಿತ್ತು.

ಇವುಗಳನ್ನು ಕಂಡ ವಿದ್ಯಾರ್ಥಿ, ಜೊತೆ-ಯಲ್ಲಿದ್ದ ಗುರುಗಳಿಗೆ ಹೀಗೆ ಹೇಳಿದನು. "ಗುರುಗಳೇ ಈಗ ನಾವು ಒಂದು ತಮಾಷೆ ಮಾಡೋಣ, ಆ ಜೋಡುಗಳನ್ನು ಬಚ್ಚಿಡೋಣ, ನಾವುಗಳು ಅವನಿಗೆ ಕಾಣದಂತೆ ಇಲ್ಲೇ ಮರಗಳ ಸಂದಿಯಲ್ಲಿ ಅವಿತುಕೊಳ್ಳೋಣ. ಅವನು ಬಂದು ನೋಡಿದಾಗ ತನ್ನ ಪಾದರಕ್ಷೆಗಳು ಮಾಯವಾಗಿರುವುದನ್ನು ಕಂಡು ಕಕ್ಕಾಬಿಕ್ಕಿಯಾಗಿ ಪಾಡು ಬೀಳುವುದನ್ನು ನೋಡಿ ಹರ್ಷಿಸಿಸೋಣ."

ಗುರುಗಳು ಈ ಮಾತುಗಳನ್ನು ಕೇಳಿ. – "ಅಯ್ಯಾ! ನನ್ನ ಯುವಕ ಶಿಷ್ಯನೇ ಕೇಳು. ನಾವು ಯಾವಾಗಲೂ ಇತರರಿಗೆ ತೊಂದರೆ ಕೊಟ್ಟು ಅದರಿಂದ ಸಂತೋಷಪಡಬಾರದು. ನೀನೊಬ್ಬ ಧನಿಕನಾಗಿದೀಯೆ ಈಗ ಒಂದು ಕೆಲಸ ಮಾಡು, ಆ ಜೋಡುಗಳ ಮೇಲೆ ಒಂದೊಂದು ನಾಣ್ಯವನ್ನಿಡು. ಆನಂತರ ನಾವುಗಳು ಇಲ್ಲೇ ಮರೆಯಾಗಿದ್ದು ನೋಡುತ್ತಿರೋಣ ಆ ಬಡಪಾಯಿ ಕೆಲಸ ಮುಗಿಸಿಕೊಂಡು ಬಂದು ಪಾದರಕ್ಷೆಗಳ ಮೇಲಿರುವ ನಿಧಿಯನ್ನು ಕಂಡು ಎಷ್ಟು ಹರ್ಷಗೊಳ್ಳುತ್ತಾನೆಂಬುದನ್ನು ನೋಡೋಣ" ಎಂದನು.

ವಿದ್ಯಾರ್ಥಿಯು ಹಾಗೆಯೇ ಮಾಡಲು ಒಪ್ಪಿ ಅವುಗಳಲ್ಲಿ ಒಂದೊಂದು ಬೆಲೆ ಬಾಳುವ ನಾಣ್ಯ ಇಟ್ಟು ಹತ್ತಿರದ ಪೊದೆಗಳ ಮಧ್ಯೆ ಮರೆಯಾಗಿ ಕುಳಿತು ನೋಡುತ್ತಿದ್ದರು.

ಕೂಲಿಯವ ಕೆಲಸ ಮುಗಿಸಿಕೊಂಡು ಹೊಲದ ಬದಿಗೆ ಬಂದು ತಾನಿಟ್ಟಿದ್ದ ಅಂಗಿಯನ್ನೂ ಪಾದರಕ್ಷೆಗಳನ್ನೂ ಧರಿಸಲು ಬಂದನು. ಪಾದರಕ್ಷೆಗಳನ್ನು ಕೊಡವುತ್ತಿರಲಾಗಿ ನಾಣ್ಯ ನೆಲದ ಮೇಲೆ 'ಥಣ್' ಎಂದು ಬಿತ್ತು. ಅಕಸ್ಮಾತ್ತಾಗಿ ದೊರೆತ ಈ ಅಪೂರ್ವ ಹಣದಿಂದ ಆವನ ಮುಖವು ಅರಳಿತು. ನಾಣ್ಯವನ್ನು ಕೈಲಿ ಹಿಡಿದು ನಲಿಯುತ್ತಾ, ಮತ್ತೆ ಮತ್ತೆ ನೋಡುತ್ತಾ ನಲಿದನು. ಆ ನಾಣ್ಯವನ್ನು ಕಿಸೆಯೊಳಗೆ ಹಾಕಿ, ಇನ್ನೊಂದು ಪಾದರಕ್ಷೆಯನ್ನು ಧರಿಸಲು ಕೈಗೆ ತೆಗೆದುಕೊಂಡನು. ಅದರಲ್ಲೂ ಸಿಕ್ಕಿದ ಇನ್ನೊಂದು ನಾಣ್ಯವನ್ನು ಕಂಡು ಅವನ ಹರ್ಷ ಹಿಮ್ಮಡಿಸಿತು. ಆನಂದದಿಂದ ಕುಣಿಯಲಾರಂಭಿಸಿದನು. ಅಷ್ಟಕ್ಕೇ ನಿಲ್ಲಿಸದೆ, ಅಲ್ಲಿಯೇ ಮಂಡಿಯೂರಿ ಕುಳಿತು, ಆಕಾಶದ ಕಡೆ ನೋಡುತ್ತಾ "ಭಗವಂತ ನೀನೇ ಆಪದ್ಬಂಧು ; ಮನೆಯಲ್ಲಿ ಮಡದಿ ಖಾಯಿಲೆ ಬಿದ್ದಿದ್ದಾಳೆ ; ಮಕ್ಕಳು ಹಸಿವಿನಿಂದ ನರಳುತ್ತಿದ್ದಾರೆ, ಈ ಸಮಯದಲ್ಲಿ ಎಲ್ಲಿಂದ ಈ ಸಹಾಯ ಒದಗಿಸಿದೆಯೋ, ದಯಾಮೂರುತಿ ನನ್ನ ಕಷ್ಟಗಳನ್ನು

ಮಣ್ಣಿನ ಮಕ್ಕಳ ಮೋಜಿನ ಸರಣಿ

ಸಂಗ್ರಹ:—ಕೆ. ವಿ. ವಿರೂಪಾಕ್ಷ ಗೌಡ

ಆರಂಭ ಅಡಿವ್ಯಾಗ ಸಿಹಿ ನೀರಿನ ಬಾವ್ಯಾಗ
ನಲವತ್ತೊಂದು ಕಾಯಿ ಹೊಡಿಸೇನೆ। ಬಾವಿಗೆ
ನಾಗಾಳದ ಕಡಲೆ ಪಣಿವಾರ॥

ಅಟ್ಟಂಬ ಅಡಿವ್ಯಾಗ ಉಪ್ಪು ನೀರಿನ ಬಾವ್ಯಾಗ
ಇಪ್ಪತ್ತೊಂದು ಕಾಯಿ ಹೊಡಿಸೇನೆ। ಬಾವಿಗೆ
ಕುಕ್ಕುಳದ ಕಡಲೆ ಪಣಿವಾರ॥

ಎಲ್ಲೆಲ್ಲಿ ನೋಡಿದರೆ ತೆಳ್ಳನ್ನ ಕಲ್ಲಿಲ್ಲ
ಜಲ್ಲಾನೆ ಹರಿವ ಜಲವಿಲ್ಲ। ಸಿದ್ದೇಶ
ಗಲ್ಲಿ ಪಿಲ್ಲೆಲ್ಲಿ ಬಗೆಯಲಿ?

ಎತ್ತೆತ್ತ ನೋಡಿದರೂ ಬಟ್ಟನ್ನಕಲ್ಲಿಲ್ಲ
ಚಟ್ಟನ್ನ ಸಿಡಿವ ಬಿಸಿಲಿಲ್ಲ। ಸಿದ್ದೇಶ
ದಶರೀಪನೆಲ್ಲಿ ವಣಗಿಸಲಿ?

ಹಳ್ಳದ ವ್ಯಾಗಳ ಹುಲಿ ಬಳ್ಳೀಲೆ ಕೈ ಬೀಸಿ
ಬಳ್ಳ ರಂಗಳಿಸಿ ಕಿವಿ ಮುರಿದು। ಸಿದ್ದೇಶ
ಬಲ್ಲಿದೇರ್‍ಯಾನ ಹುಲಿಗಳ॥

ಅಣ್ಣ ನಿನ ಗುಡಿ ಮುಂದೆ ಇನ್ನೇನು ಬೆಳದಾವ?
ಹಣ್ಣು ರುದ್ರಾಕ್ಷಿ ಮಗಿ ಮಾವು। ತದುಕೀನ
ಮರವಾಗಿ ಓಲಾಡಿ ಬೆಳೆದಾವ॥

ಸತ್ತಲ್ಲಿ ನಮ್ಮಪ್ಪ ಸಂಪಿಗ ವನವಾಗಿ
ಮಕ್ಕಳು ನಿಂದ್ರಾಕ ನೆರಳಾಗಿ। ನಮ್ಮಪ್ಪ
ದೇವರು ಮುಡಿವ ದವನಾದ॥

ಇಡಕುಗಂಚಿ ಹೂ ಬಿದಿರು ಪುಟ್ಟ ತುಂಬಿ
ಚದುರನ ಕೂಡ ಕಳುವೇನು। ದುರ್ಗದ
ಉಚ್ಚಂಗಮ್ಮನ ಸದರೀಗೆ॥

ಮಂಗಳವಾರ ದಿನ (ಮಂದನ) ಮಜಿಗಿ ಮಾಡಿ
ಉಂಡ್ಹೋಗು ಬಾರ ಹುಲಿಗೆಮ್ಮ। ಬಸವಣ್ಣನ
ಹಿಂಡುದನದಾಗ ಸುಳಿದ್ಹೋಗು॥

—

ಪಾರುಪಮಾಡಿರುವ ನಿನಗೆ ನಮೋನಮಃ" ಎಂದು ನಮ್ರತೆಯಿಂದ ಧನ್ಯವಾದಗಳನ್ನು ಸಲ್ಲಿಸಿದನು.

ಇದನ್ನೆಲ್ಲಾ ನೋಡುತ್ತಲಿದ್ದ ವಿದ್ಯಾರ್ಥಿಯ ಮನಸ್ಸು ಮರುಗಿ ಕಣ್ಣೀರು ಸುರಿಸುತ್ತಾ ನಿಂತನು. ಆಗ ಗುರುಗಳು "ಈಗ ನೋಡಿದೆಯಪ್ಪಾ ನಿನ್ನಲ್ಲಿ ಯಾವರೀತಿಯ ಪರಿಣಾಮ ಉಂಟಾಯಿತು? ನೀನು ಕುರಿತಂತೆ ಮಾಡಿದ್ದರೆ ಎಷ್ಟು ನೋವುಂಟಾಗುತ್ತಿತ್ತು. ನಾವು ಯಾವಾಗಲೂ ಪರರನ್ನು ನೋಯಿಸಿ, ಹರ್ಷ ಪಡಬಾರದು-" ಎಂದರು.

ವಿದ್ಯಾರ್ಥಿಯು ವಿನಯ ಪೂರ್ವಕವಾಗಿ "ಗುರುಗಳೇ! ನೀವು ಈ ದಿವಸ ನಾನು ಜನ್ಮಾವಧಿ ಮರೆಯಲಾರದಂಥ ಒಂದು ಘನವಾದ ಪಾಠ ಕಲಿಸಿರುವಿರಿ. ಈಗ ನನಗೆ "ಪ್ರತಿ ಗ್ರಹಕ್ಕಿಂತ, ದಾನವೇ ಮಿಗಿಲಾದುದು — ಕೊಡುವಾತನೇ ಧನ್ಯ" ಎಂಬ ಸೂಕ್ತಿಯ ನಿಜಾಂಶ ಮನದಟ್ಟಾಯಿತು" ಎಂದನು.

(ಆಂಗ್ಲ ಭಾಷೆಯಲ್ಲಿದ್ದ ಕಥೆಯ ಆಧಾರದಿಂದ)

ಬಾಪೂಗೀತೆ

—"ನಾಣಿ"

ಮಹಾ ಪರ್ವತ ಸಾನುವಿನಡಿಯ ಕಂದರವೊಂದರಲ್ಲಿ ಚಿಲುಮೆಯಾಗಿ ಚಿಮ್ಮಿ, ಝರಿಯಾಗಿ ಹರಿದು, ಹಳ್ಳವಾಗಿ ಹೊರಳಿ, ಹೊಳೆಯಾಗಿ ಮುಂಬರಿದು, ನದಿಯಾಗಿ ನುಗ್ಗಿ ಗುಂಡು ಬಂಡೆಗಳ ಪ್ಪಳಿಸಿದರೂ ಲೆಕ್ಕಿಸದೆ ಎದುರಿಸಿ, ತನಗೆ ಸರಿಕಂಡ ಮಾರ್ಗದಲ್ಲಿ ಕ್ರಮಿಸಿ, ಮೈದಾನದಲ್ಲಿ ವಿಸ್ತರಿಸಿ, ಅನಂತ ಉಪನದಿಗಳನ್ನು ಒಳಪಡಿಸಿಕೊಂಡು, ಅವಿಶ್ರಾಂತವಾಗಿ ಶಾಂತವಾಗಿ ಹರಿಯುತ್ತಾ, ಅಸಂಖ್ಯಾತ ಜೀವರಾಶಿಗಳಿಗೆ ನೀರುಣಿಸಿ, ಹರಿದೆಡೆಯಲ್ಲಿನ ಭೂಭಾಗವನ್ನು ನೀರಿನಿಂದ ಉಣಿಸಿ, ತಣಿಸಿ ಸಸ್ಯ ಶ್ಯಾಮಲವನ್ನಾಗಿಸಿ, ಅಡೆ ತಡೆಗಳನ್ನು ಅಣೆಕಟ್ಟೆಗಳನ್ನು ತನಗೆ ಮಾನವನೊಡ್ಡಿದ ಸವಾಲಾಗಿ ಸ್ವೀಕರಿಸಿ, ಶಾಂತಗತಿಯಿಂದಲೇ ಕ್ರಮಿಸಿ ತನ್ನ ಗಂತವ್ಯವಾದ ಮಹಾಸಾಗರವನ್ನು ಸೇರಿ ಅದರಲ್ಲೇ ವಿಲೀನವಾಗುವ ಮಹಾನದಿಯಂತೆ ಮಹಾತ್ಮರ ಜೀವನ ತರಂಗಿಣಿಯ ಯಾತ್ರೆಯೂ ಮಹತ್ತರವಾದುದು. ಅವರ ಹುಟ್ಟು ಸಾಮಾನ್ಯ ಕುಟುಂಬದಲ್ಲಿ, ಬೆಳವಣಿಗೆಯು ಸಾಮಾನ್ಯ ಮಾನವ ಬಾಲರಂತೆ, ಆದರೆ ಬೆಳೆಯುತ್ತ ಹೋದಂತೆ ಭವ್ಯವಾಗಿ ದಿವ್ಯವಾಗಿ ಬೃಹತ್ತಾಗಿ ಬಾಳ ಮಹತ್ತಿನ ಕಡೆಗೆ ಧಾವಿಸಿ ವಿರಾಟ್‌ನಲ್ಲಿ ಲೀನಗೊಂಡು ಅಮರರಾಗುವರು. ಈ ಬಗೆಯ ಬಾಳ ಸಂಹಿತೆಗೆ ಭಾರತದ ಭಾಗ್ಯವಿಧಾತ ಬಾಪೂಅತ್ಯುತ್ತಮ ಉದಾಹರಣೆಯಾಗಿದ್ದಾರೆ.

ಗಾಂಧಿಜೀಯ ಹುಟ್ಟುತೀರ ಸಾಮಾನ್ಯವಾಗಿತ್ತು. ಅವರೇನೂ ಅವತಾರಿ ಪುರುಷರಂತೆ ಹುಟ್ಟಿ ಬರಲಿಲ್ಲ ತಾವು ಮಹಾತ್ಮರೆನಿಸಿಕೊಳ್ಳಬೇಕೆಂಬ ಆಸೆ ಆಕಾಂಕ್ಷೆಗಳು ಅವರಲ್ಲಿ ಮೊದಲಿನಿಂದಲು ತಲೆಹಾಕಿರಲಿಲ್ಲ. ಪರಿಸ್ಥಿತಿಯ ಪ್ರವಾಹವು ಅವರನ್ನು ಆ ದಾರಿಯತ್ತ ಎಳೆದೊಯ್ದಿತು. 1888 ರಲ್ಲಿ ಕಾನೂನಿನ ಅಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹೋದರು. 1891 ನೇ ಜೂನ್ ತಿಂಗಳಲ್ಲಿ ಬ್ಯಾರಿಸ್ಟರಾಗಿ ಬಂದರು. ಇಂಗ್ಲೆಂಡಿನಲ್ಲಿದ್ದಷ್ಟು ಕಾಲದಲ್ಲಿ ಅವರ ನಿತ್ಯಜೀವನವು ಅನೇಕ ಬಾರಿ ವಿಷಮ ಪರೀಕ್ಷೆಗಳಿಗೆ ಗುರಿಯಾಯಿತು. ಹೆಣ್ಣು ಹೊನ್ನುಗಳ ಆಮಿಷಗಳಿಗೆ, ಆಕರ್ಷಣೆಗೆ ಅವರು ಬಲಿ ಬೀಳಲಿಲ್ಲ. ಇಂಗ್ಲೆಂಡಿಗೆ ತೆರಳುವ ಮುನ್ನ ಮನೆಯಲ್ಲಿ ತಮ್ಮ ತಾಯಿಯ ಆಜ್ಞೆ ಪಾಲಿಸಲು ಕೈಗೊಂಡಿದ್ದ ಭೀಷ್ಮಪ್ರತಿಜ್ಞೆಯನ್ನು ಅನುಷ್ಠಾನಕ್ಕೆ ತಂದರು. ಆಸೆಗಳಿಗೆ ಆ ಚಿಕ್ಕ ಹರಯದಲ್ಲೂ ವಶರಾಗದೆ ಛಲತೊಟ್ಟು ತಾವಿತ್ತ ವಚನ ಪಾಲಿಸಿದರು. "ಛಲಬೇಕು ಶರಣಂಗೆ ಪರಧನವನೊಲ್ಲನೆಂಬ, ಛಲಬೇಕು ಶರಣಂಗೆ ಪರಸತಿಯನೊಲ್ಲನೆಂಬ" ಎಂಬ ಬಸವಣ್ಣನವರ ಸತ್ಯಾಗ್ರಹ ಸಂಹಿತೆಯು ಅವರ ಎದೆಯಾಳದಲ್ಲಿ ನೆಲೆ ನಿಂತಿತು. ಸುರಾ ಸುಂದರಿಯರ ಮೋಹಕ ಆಕರ್ಷಣೆಗೆ ತಮ್ಮ ಇಂದ್ರಿಯಗಳನ್ನು ಬಲಿಗೊಡದಂತೆ ನಿಗ್ರಹಿಸಿದರು. ಅವರು ಬ್ಯಾರಿಸ್ಟರಾದ ನಂತರ ಸಾಮಾನ್ಯ ವಕೀಲರಂತೆಯೇ ತಮ್ಮ ವ್ಯವಸಾಯವನ್ನು ಪ್ರಾರಂಭಿಸಿದರು. ಮೊದಲ ಬಾರಿಗೆ ಅವರು ಕೋರ್ಟಿನಲ್ಲಿ ಭೀತರಾಗಿ ಮಾತನಾಡಿದ್ದೂ ಉಂಟು. ನಂತರ ಅನತಿ ಅವಧಿಯಲ್ಲಿ ಅಂದರೆ 1893 ರಲ್ಲಿ ತಮ್ಮ ವಕೀಲಿ ವ್ಯವಸಾಯಕ್ಕಾಗಿಯೇ ದಕ್ಷಿಣ ಆಫ್ರಿಕೆಗೆ ತೆರಳಿದರು. ಅಲ್ಲಿ ಹಿಂದೀಯುವರ ಹೀನವಾದ ಪರಿಸ್ಥಿತಿಯು ಅವರ ಕಣ್ ತೆರೆಯಿಸಿತು. ಸ್ವತಃ ತಾವೇ ಹಲವಾರು ಬಾರಿ ಆಂಗ್ಲರ ದುರಾಡಳಿತದ ದುರ್ಭರ ಪ್ರಹಾರಕ್ಕೆ ಗುರಿಯಾದರು. ರುಮಾಲೆ ಧರಿಸಿದ್ದೇ ಮಹಾಪರಾಧವಾಗಿ, ರೈಲಿನಲ್ಲಿ ಆಂಗ್ಲನೊಂದಿಗೆ ಪ್ರಯಾಣ ಮಹಾಪರಾಧವಾಗಿ, ತಾವು ಕಪ್ಪು ಬಣ್ಣದ ತೊಗಲಿನ ಹಿಂದುವಾಗಿದ್ದುದೇ ದೊಡ್ಡ ಅಪರಾಧವಾಗಿ– ಈ ಅಪರಾಧಗಳ ಪ್ರತೀಕಾರವಾಗಿ ಆಂಗ್ಲರು ಬಿಗಿದ ವಿದ್ವೇಷದ

ಪ್ರಹಾರಗಳನ್ನು ಅನುಭವಿಸಿದರು. ಅವರ ಮನಸ್ಸು ಅನ್ಯಾಯದ ವಿರುದ್ಧ ಹೋರಾಡಲು ದೃಢ ನಿರ್ಧಾರ ಕೈಗೊಂಡಿತು. ಅಸತ್ಯ ಅನ್ಯಾಯ ಅಧರ್ಮಗಳ ವಿರುದ್ಧ ಆಗ್ರಹವು ಬೇರೂರಿ ಬಲಗೊಂಡಿತು. ತಮ್ಮಲ್ಲಿದ್ದ ಸುಪ್ತ ಶಕ್ತಿಯ ಪ್ರಕಟಣೆಗೆ ಪರಿಸ್ಥಿತಿಯು ಅವಕಾಶವನ್ನು ಕಲ್ಪಿಸಿಕೊಟ್ಟಿತು.

ಸತ್ಯಾಗ್ರಹದ ಪ್ರಥಮ ಮಂತ್ರಾಕ್ಷತೆ ಅವರಿಗೆ ದಕ್ಷಿಣ ಆಫ್ರಿಕಯಲ್ಲಿ ಸಿಕ್ಕಿತೆಂದು ಹೇಳಬಹುದು. ಹರಯದಲ್ಲಿ ಅಭ್ಯಸಿಸಿದ ಆತ್ಮಸಂಯಮ, ಇಂದ್ರಿಯ ನಿಗ್ರಹಗಳ ಜೊತೆಗೆ ಸತ್ಯಕ್ಕಾಗಿ ಛಲತೊಡುವ ಪಟ್ಟು ಪ್ರೌಢಾವಸ್ಥೆಯಲ್ಲಿ ಅಳವಟ್ಟಿತು. ತಮ್ಮ ನಿತ್ಯ ಜೀವನವನ್ನೇ ಸತ್ಯದ ಒರೆಗಲ್ಲಿಗೆ ಹಚ್ಚಿದರು. ಸತ್ಯಶೋಧನೆಗೆ ಗುರಿಯಾದ ಅವರ ಬಾಳು ಸತ್ಯಸಾಧನೆಗಾಗಿ ಸಜ್ಜಾಯಿತು. ಮಾನವರೊಂದಿಗೆ ಸಹಬಾಳ್ವೆ ಅನುಕಂಪ ಕರುಣೆಗಳು ಅವರ ಮನೋಭೂಮಿಯನ್ನು ಹದಗೊಳಿಸಿದವು. ಅವರ ಆತ್ಮಶಕ್ತಿಯ ತೇಜಸ್ಸು ಪ್ರಜ್ವಲಿಸಿತು. ಲೌಕಿಕ ಜೀವನವು ಅನಂತ ದುಃಖಕ್ಕೆ. ಅವಮಾನಕ್ಕೆ ಗುರಿಯಾದರೂ ಸಹ ಅವರ ಧೀಮನಸ್ಸು ವಿಚಲಿತವಾಗಲಿಲ್ಲ. "ಧೀರಸ್ತತ್ರ ನಮುಹ್ಯತಿ" ಎಂಬಂತೆ ಅವರು ಅಂಜದೆ ಅಳುಕದೆ ಧೈರ್ಯದಿಂದ ಹೋರಾಡಿದರು. ಈ ಪ್ರಸಂಗದಲ್ಲಿ ಅವರು ಕೈಗೆತ್ತಿಕೊಂಡ ಅಸ್ತ್ರವು ರಕ್ತ ಪಿಪಾಸವಾದ ಕೂರಸಿಯಲ್ಲ, ಅಹಿಂಸಾತ್ಮಕವಾದ ಶಾಂತಿಯ ವಿಷ್ಣುಚಕ್ರ. ಹೀಗೆ ಅವರು ಪ್ರೌಢಾವಸ್ಥೆಗೆ ತಲಪುವ ವೇಳೆಗಾಗಲೇ ಅವರ ಹೃದಯ ಭೂಮಿಯು ಸತ್ಯ-ಅಹಿಂಸೆ ಇಂದ್ರಿಯ ನಿಗ್ರಹಗಳ ತ್ರಿವೇಣೀ ತರಂಗಿಣಿಯಿಂದ ಸಿಂಚಿತವಾಗಿ ಧರ್ಮದ ಬೆಳೆಯಲು ಹದಗೊಂಡಿತು. ಹದಗೊಂಡ ಮನೋಕ್ಷೇತ್ರವು ಮತಷ್ಟು ಫಲವತ್ತಾಗುವಂತೆ ಭಗವದ್ಗೀತೆಯು ಪುಷ್ಟಿ ನೀಡಿತು.

ಇಂಗ್ಲೆಂಡಿನಲ್ಲಿರುವಾಗಲೆ ಅವರಿಗೆ ಗೀತೆಯ ಪರಿಚಯವಾಗಿತ್ತು. ಅದರ ಮನಸ್ಸನ್ನು ಆಗಲೇ ಹಿಡಿದಿತ್ತು. ಅದರ ಅಭ್ಯಾಸವನ್ನು ಹಾಗೆಯೇ ಮುಂದುವರಿಸಿದ್ದರು. ಓದಿದಷ್ಟು ಅದರಲ್ಲಿಯ ಜಿಜ್ಞಾಸೆಯು ಹೆಚ್ಚುತ್ತ ಹೋಗಿ ಅದು ಅವರ ಜೀವನ ಸಂಗಾತಿಯಾಯಿತು. ನಿಜವಾದ ಸಮಾಜ ಸುಧಾರಕ, ಆತ್ಮಸಾಧಕನಿಗೆ ಇರಬೇಕಾದ ಸ್ಥಿತ ಪ್ರಜ್ಞಸ್ಥಿತಿಯನ್ನವರು ಆತ್ಮಸಾಕ್ಷಾತ್ ಮಾಡಿಕೊಂಡ ಗೀತಾಭ್ಯಾಸದಿಂದಲೇ. ಗೀತಾಭ್ಯಾಸವು ಅವರ ಬಾಳಿನ ನಿತ್ಯವ್ರತವಾದ ಪ್ರಸಂಗವೂ ಸಹ ಸ್ಮರಣೀಯವಾದುದು.

ವಿದ್ಯಾಭ್ಯಾಸಕ್ಕಾಗಿ ಅವರು ಇಂಗ್ಲೆಂಡಿಗೆ ಹೋಗಿ ಇನ್ನೂ ಒಂದು ವರ್ಷವಾಗಿರಲಿಲ್ಲ. ಅಷ್ಟರಲ್ಲಿ ಅವರಿಗೆ ಇಬ್ಬರು ಥಿಯೋಸಾಫಿಸ್ಟ್ ಸಹೋದರರ ಗೆಳೆತನವಾಯಿತು. ಅವರಲ್ಲೊಬ್ಬರು ಎಡ್ವಿನ್ ಆರ್ನಾಲ್ಡ್ ರವರು. ಆಂಗ್ಲ ಭಾಷೆಯಲ್ಲಿ ಮಾಡಿದ ಭಗವದ್ಗೀತೆಯ ಅನುವಾದವನ್ನು ಅವರು ಓದುತ್ತಿದ್ದರು ತಮ್ಮ ಜೊತೆಗೆ ಕುಳಿತು ಮೂಲ ಸಂಸ್ಕೃತವನ್ನು ಓದಬೇಕೆಂದು ಅವರು ಗಾಂಧೀಜಿಯನ್ನು ಕೇಳಿಕೊಂಡರು. ಗಾಂಧೀಜಿಗೆ ಬಹಳ ನಾಚಿಕೆಯಾಯಿತು; ತಮ್ಮ ಧಾರ್ಮಿಕ ಗ್ರಂಥದ ಪರಿಚಯ ಕೂಡ ತಮಗಿಲ್ಲವಲ್ಲಾ ಎಂದು ಮಮ್ಮಲ ಮರುಗಿದರು. ಅವರಿಗೆ ಸಂಸ್ಕೃತದ ಗಂಧವೇ ಇರಲಿಲ್ಲ. ಗುಜರಾಥಿಯಲ್ಲಿನ ಅದರ ಅನುವಾದವನ್ನು ಅವರು ಓದಿರಲಿಲ್ಲ. ಈ ಸಂಗತಿಯನ್ನು ಆರ್ನಾಲ್ಡರಿಗೆ ಬಹಳ ಸಂಕೋಚದಿಂದ, ಆದರೂ ಸ್ಪಷ್ಟವಾಗಿಯೇ ಹೇಳಿದರು. ಆದರೂ "ಅವರೊಂದಿಗೆ ಸೇರಿ ತಾವೂ ಗೀತೆ ಓದಲು ಸಿದ್ಧ ಹಾಗೂ ಎಲ್ಲಿಯಾದರೂ ಅರ್ಥವು ಗೊಂದಲಮಯವಾಗಿದ್ದರೆ, ಅದನ್ನು ಮೂಲ ಸಂಸ್ಕೃತ ನೋಡಿ ತೋರಿಸಿ ಕೊಡಬಲ್ಲೆ ಎಂದು ತಿಳಿಸಿದರು. ಹೀಗೆ ಅಣ್ಣ ತಮ್ಮಂದಿರ ಜೊತೆಗೆ ಪ್ರಾರಂಭವಾದ ಗೀತಾಭ್ಯಾಸ, ಮುಂದೆ ಅವರ ಜೀವನದ ಮುಖ್ಯ ಆಲಂಬವಾಯಿತು. ನಂತರ ಇಂಗ್ಲಿಷ್, ಹಿಂದೀ, ಗುಜರಾಥಿ, ಮರಾಠಿ ಭಾಷೆಗಳಲ್ಲಿನ ಅದರ ಅನುವಾದವನ್ನು ಅವರು ಓದಿದರೂ ಸಹ ಎಡ್ವಿನ್ ಆರ್ನಾಲ್ಡರು ಮಾಡಿದ್ದ ಭಾಷಾಂತರದಷ್ಟು ಪರಿಣಾಮ ಮಾಡಲಿಲ್ಲ. ಆರ್ನಾಲ್ಡರ ಅಚ್ಚೊತ್ತಿದ ಮುದ್ರೆ ಮಾಸಲಿಲ್ಲ. "ಮೂಲಗ್ರಂಥದ ಭಾವವನ್ನು ಚೆನ್ನಾಗಿ ಕಾಯ್ದುಕೊಂಡಿದೆ, ಭಾಷಾಂತರವೆಂದು

ಎನಿಸುವುದೇ ಇಲ್ಲ" ಎಂದಿದ್ದಾರೆ. ಒಂದು ಶ್ರೇಷ್ಠ ಭಾಷಾಂತರ ಕೃತಿ ಯಾವ ಪ್ರಭಾವವನ್ನು ಬೀರಬಲ್ಲುದು ಎಂಬುದು ಇದರಿಂದ ಸ್ಪಷ್ಟವಾಗಿದೆ. ಅಂದಿನಿಂದಲೂ ಗೀತೆ ಮತ್ತು ಗಾಂಧೀಜೀ ಇವರ ನಡುವಿನ ಸಬಂಧವು ಅತ್ಯಂತ ನಿಕಟವಾಯಿತು.

"ಸಹಸ್ರಾರು ಜನರಿಗೆ ಗೀತೆಯೇ ನಿಜವಾದ ತಾಯಿ, ಏಕೆಂದರೆ ಕಷ್ಟ ಬಂದಾಗ, ಅದು ಸಾಂತ್ವನದ ಪುಷ್ಟಿಕರ ಹಾಲನ್ನು ಕೊಡುತ್ತದೆ. ಅದು ನನ್ನ ಆಧ್ಯಾತ್ಮಿಕ ಕೋಶ" ಎಂದಿದ್ದಾರೆ ಗಾಂಧಿಜೀ. ಅದರ ಕೆಲವು ಶ್ಲೋಕಗಳಂತೂ ಅವರ ದಿನ ನಿತ್ಯದ ಪಾರಾಯಣಕ್ಕಾಗಿ ಇದ್ದುವು. ತಮ್ಮ ಸಮಗ್ರ ಜೀವನವನ್ನೇ ಗೀತೋಪದೇಶದ ಆಧಾರದಮೇಲೆ ರೂಪಿಸಿಕೊಂಡಿರುವುದಾಗಿ ಹೇಳಿದ್ದಾರೆ. ಅದರ ಅನುವಾದವನ್ನೂ ಸಹ ಅವರು ಅನಾಸಕ್ತಿ ಯೋಗ ಎಂಬ ಹೆಸರಿನಿಂದ ಮಾಡಿದ್ದಾರೆ. ಪ್ರತಿಯೊಂದು ಶಾಲೆಯಲ್ಲೂ ಗೀತೆಯನ್ನು ಓದಿಸಬೇಕು ಎಂದು ಸಲಹೆ ಮಾಡಿದ್ದಾರೆ ಗೀತೆಯು ಒಂದು ಗಹನ ತಾತ್ವಿಕ ಗ್ರಂಥ. ಅದು ಶ್ರೀ ಸಾಮಾನ್ಯನಿಗೆ ವೇದ್ಯವಾಗುವ ವಿಷಯವಲ್ಲ ಎಂಬುದು ಅನೇಕರ ಅಭಿಪ್ರಾಯವಾದರೂ ಗಾಂಧೀಜಿ ಇದನ್ನು ಒಪ್ಪುವುದಿಲ್ಲ. ಸಂಸಾರದ ಜಂಜಾಟದಲ್ಲಿ, ಒಳಿತು ಕೆಡುಕುಗಳ ನೂಕುನುಗ್ಗಾಟದಲ್ಲಿ ದಾರಿಗಾಣದ ಸಾಮಾನ್ಯರಿಗೂ ಪಾಮರರಿಗೂ ಅದೊಂದು ದಾರಿದೀಪವಾಗಿದೆ ಎಂದು ಅವರು ಹೇಳಿದ್ಧಾರೆ. "ಅವಾಚ್ಯ ಹಾಗೂ ಅಶ್ಲೀಲ ಸಾಹಿತ್ಯದ ಪ್ರವಾಹವು ವೇಗವಾಗಿ ಹರಿಯುತ್ತಿರುವ ಈ ಕಾಲದಲ್ಲಿ ಹಿಂದೂ ಧರ್ಮದ ಅದ್ವಿತೀಯವೆನಿಸಿದ ಈ ಗ್ರಂಥದ ಸರಳ ಅನುವಾದ ಎಲ್ಲರಿಗೂ ದೊರೆತು ಅವರು ಆ ದುಷ್ಟ ಸಾಹಿತ್ಯ ಪ್ರವಾಹವನ್ನು ಎದುರಿಸುವ ಶಕ್ತಿಯನ್ನು ಹೊಂದಬೇಕು ಎಂಬುದೇ ನನ್ನ ಹಂಬಲ" ಎಂದು ಅವರು ಅನಾಸಕ್ತಿ ಯೋಗದ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಕುರುಕ್ಷೇತ್ರವೆಂಬುದು ಪ್ರತಿಯೊಬ್ಬನ ಅಂತಃಕರಣದಲ್ಲಿಯೇ ಇದೆ. ಅದನ್ನು ಅದನ್ನು ಧರ್ಮ ಕ್ಷೇತ್ರವನ್ನಾಗಿ ಮಾಡುವುದೇ ಪುರುಷಾರ್ಥ ಎಂದಿದ್ದಾರೆ ಗಾಂಧೀಜಿ. ಮಹಾಭಾರತದಲ್ಲಿ ವರ್ಣಿತವಾಗಿರುವ ಭೌತಿಕ ಯುದ್ಧ ಒಂದು ನಿಮಿತ್ತ ಪ್ರಯೊಬ್ಬನ ಹೃದಯದಲ್ಲಿ ನಿರಂತರವೂ ನಡೆಯುತ್ತಿರುವ ದ್ವಂದ್ವ ಯುದ್ಧದ ವರ್ಣನೆ ಅದು. ದುರ್ಯೋಧನಾದಿಗಳು ಆಸುರೀವೃತ್ತಿ, ಅರ್ಜುನಾದಿಗಳು ದೈವೀವೃತ್ತಿ. ಒಂದು ವೇಳೆ ಈ ಯುದ್ಧವು ಐತಿಹಾಸಿಕವಾಗಿದ್ದರೂ, ನಮ್ಮ ಅಂತರಂಗದಲ್ಲಿ ನಿತ್ಯವೂ ನಡೆದಿರುವ ಒಳಿತು-ಕೇಡು, ನೀತಿ-ಅನೀತಿ ಇವುಗಳಿಗೆ ಅನ್ವಯಿಸಿ, ಧರ್ಮ ಮಾರ್ಗದಿಂದ ನಡೆಯುವುದರಿಂದಲೇ ಜಯ ಎಂಬುದನ್ನು ವೇದವ್ಯಾಸರು ವರ್ಣಿಸಿದ್ದಾರೆ. ಈ ದೃಷ್ಟಿಯಿಂದಲೇ ಆ ಮಹಾಮುನಿಯು "ತತೋಜಯಮುದೀರಯೇತ್" ಎಂದೂ ತಮ್ಮ ಕಾವ್ಯ ಗೀತೆಯನ್ನು ಹೆಸರಿಸಿದ್ದಾರೆ ಎಂದು ಗಾಂಧೀಜಿ ಹೇಳಿದ್ದಾರೆ

ಇಂತಹ ಅನಾಸಕ್ತಿ ಯೋಗದ ಮಹಾತ್ಮನು ದಾಸ್ಯ ಶೃಂಖಲೆಯಲ್ಲಿ ಬಂಧಿತವಾದ ಭಾರತಕ್ಕೆ ಬಂಧ ವಿಮೋಚನೆಯನ್ನು ಸಾಧಿಸಿಕೊಟ್ಟು, ಸ್ವಾತಂತ್ರ್ಯದ ಮಹತ್ ಫಲವನ್ನು ದೊರಕಿಸಲು ಶಕ್ತನಾದುದು ಗೀತಾಮೃತ ಪಾನದ ಸತ್ವದಿಂದಲೇ ಎಂದು ಹೇಳಬಹುದು. ಪ್ರಚಂಡ ಆಯುಧ ಕೂಡಿದ ಅಧಿಕಾರ ಬಲ ಸಂಪನ್ನವಾದ, ಪರಕೀಯರ ಸಂಪತ್ತನ್ನು ತಮ್ಮದನ್ನಾಗಿಸಿಕೊಂಡು ಅನುಭವಿಸುತ್ತಾ ಅದನ್ನು ಅದರ ಮಾಲೀಕರಿಗೆ ಹಿಂದಿರುಗಿಸಲಾರದೆ ಮೂರ್ಖ ಪಟ್ಟು ಹಿಡಿದಿದ್ದ, ಆಂಗ್ಲರ ದುಷ್ಟ ಕೌರವ ಶಕ್ತಿಯ ವಿರುದ್ಧ ಅಹಿಂಸೆಯ ಬಿಲ್ಲು ಹಿಡಿದು, ಸತ್ಯಾಗ್ರಹದ ಅಸ್ತ್ರ ಹೂಡಿ ಧರ್ಮ ಮಂತ್ರದಿಂದ ಸಂಧಾನ ಮಾಡಿ, ತ್ಯಾಗ ಫಲವನ್ನು ಅದಕ್ಕೆ ಧಾರೆಯೆರೆದು, ಮಾತೃಭೂಮಿಯ ಸ್ವಾತಂತ್ರ್ಯ ಸಾಧನೆಯಲ್ಲಿ ಜಯ ಹೊಂದಿ ವಿಶ್ವ ಮಾನವರೆದೆಯಲ್ಲಿ ಪೂಜ್ಯ ಪೀಠವನ್ನು ಪಡೆದ, ಅದ್ವಿತೀಯ ಕರ್ಮಯೋಗಿ ಆಧುನಿಕ ಭಾರಭೀಷ್ಮ ಬಾಪೂಜಿ, ಇಂದಿಲ್ಲವಾದರೂ ಅವರು ವಿಶ್ವ ಮಾನವರಿಗಿತ್ತ ಬಾಳಬುತ್ತಿಯು ಜನ್ಮಜನ್ಮಕ್ಕೂ ಪುಷ್ಟಿ ಕೊಡುವಂತಹುದೆಂದೇ ಆ ಮಹಾತ್ಮನ ಅಮರತ್ವವು ಸಿದ್ಧಗೊಂಡಿದೆ.

—

ಮುಂದುವರೆದ ಲೇಖನ

ಜನಪದ ಗೀತೆಯಲ್ಲಿ

ಬಸವಣ್ಣ

ಡಾ|| ನಂ. ತಪಸ್ವೀಕುಮಾರ್.

ಮೂಕ ಜಂತುಗಳಾದ ಎತ್ತುಗಳು ತಮ್ಮ ಕಷ್ಟಸುಖಗಳನ್ನು ಹೀಗೆಂದು ತೋಡಿಕೊಂಡವೆಂದು ಜನಪದ ಕವಿ ಕಲ್ಪಿಸಿ ಹಾಡಿರುವುದು ಅತ್ಯಂತ ಹೃದಯ ಸ್ಪರ್ಶಿಯೂ ರಸವತ್ಪೂರ್ಣವೂ ಆಗಿದೆ.

ಹುಟ್ಟಿದಲ್ಲಿ ದುಡಿಬೇಕೊ ಕೊಟ್ಟಲ್ಲಿ ನಡಿಬೇಕೊ
ಪಡದ ಬಂದಲ್ಲಿ ಉಣಬೇಕೊ ಎಲೊ ಬಸವ
ರೈತ ಹಾಕಿದ ಮೇವತಿನ ಬೇಕೊ

ಬಾಯಿಲ್ಲದ ಬಸವಣ್ಣಗ ಬಾಗಿಸಿ ಕೊರಳ ಕಟ್ಟಿ
ಜೋಡ ಬಾರ ಹಚ್ಚಿ ಬಡಿದಾರ ಬಸವಣ್ಣ
ಸಾವ ಬೇಡ್ಯಾನ ಶಿವನಲ್ಲಿ

ಓಣ್ಯಾಗ ನಿಂತಾನ ಚಿಂತಿ ಮಾಡ್ಯಾನ ಬಸವ
ಪಾಪ ಪುಣ್ಯಾವ ನಿನಕಡ್ಯೊ ಎಲೊ ರೈತ
ಖಟಗಗ ಸನ್ನ ಕೊಡಬ್ಯಾಡೊ

ಆದರೂ ಮುಪ್ಪಾದಾಗ, ಕಾಯಿಲೆಯಾದಾಗ ಎತ್ತುಗಳು ಸಾಯುತ್ತವೆ. ಆಗ ಮಿಕ್ಕವರು ಹೀಗೆ ಮಾಡುತ್ತಾರೆಂದು ಜನಪದ ಕವಿ ಹಾಡಿದ್ದಾನೆ:

ಸತ್ತಾನ ಬಸವಣ್ಣ ಹೊತ್ತಾರ ಹೊಲೆಯರು
ಮುತ್ತವನ ಒಯ್ದು ಸುಲದಾರ ಹೊಲೆಯರು
ತುತ್ತ ಮಾಡಿ ಅವನ ಉಂಡಾರ

ಬಾಕಲ ತೋಳ್ಹಿಡದು ಯಾಕಳತಿ ನೀಲವ್ವ
ಲೋಕದಂತವನಲ್ಲ ನಿನ ಮಗ ನೀಲವ್ವ
ಚಾಕರಿಗ್ಹೋಗ್ಯಾನ ಶಿವನಲ್ಲಿ
ಸತ್ಸುಳ್ಳಿ ಬಸವಾಗ ಸತ್ತನೆಂಬಲಿ ಬ್ಯಾಡ
ಮುತ್ತೆ ಮಾದೆಗನ ಮನಿಯಾಗ ಬಸವಣ್ಣ
ಜತ್ತಿಗಿ ಮಿಣಿಯಾಗಿ ದುಡದಾನ
ಇದ್ದರೂ ದುಡದೆಲ್ಲೊ ಸತ್ತರೂ ದುಡದೆಲ್ಲೊ
…………………

ನೀನು ಎಂದು, ಧನ್ಯ ಜೀವನದಿಂದ ಮುಕ್ತನಾದ ಬಸವಣ್ಣ ದೇವರಾಗಿ ಪೂಜ್ಯನಾಗುತ್ತೀಯೆ, ಎಂಬುದಾಗಿ ಕವಿ ಸಮಾಧಾನಗೊಂಡಿರುವಂತಿದೆ. ಎಂತಲೇ ರೈತರು ಹಾಗೂ ಜಾತಿ ಜಾನಪರು ಯಾರೂ ಎತ್ತು, ಹಸುಗಳನ್ನು ಒದೆಯುವುದಿಲ್ಲ; ಅವುಗಳ ಸಗಣಿಯನ್ನು ಕಂಡು ಮೂಗು ಮುರಿಯುವುದಿಲ್ಲ. ಅವುಗಳ ಸೇವೆ ಭಗವಂತನ ಸೇವೆ ಎಂದು ಮುಂತಾಗಿ ಹಂಬಲಿಸಿ, ಧನ್ಯ ಜೀವದಿಂದ ಮುಕ್ತನಾದ ನೀನು ಬಸವಣ್ಣ ದೇವರಾಗಿ ಪೂಜ್ಯ ಎಂದು ನಂಬಿ ತಮ್ಮ ಮನೆ ಸೇರಿದ ದನಕರುಗಳನ್ನು ಅತ್ಯಂತ ಪ್ರೀತಿ ಕರುಣೆಗಳಿಂದ ಕಂಡು ಮುಪ್ಪಾದ ಎತ್ತುಗಳು ತಮ್ಮ ಮನೆಯಲ್ಲೇ ಗೇದು ಸತ್ತಾಗ ಅವುಗಳನ್ನು ಗೋರಿಗೊಳಿಸಿ ಪೂಜಿಸುವ ಸಜ್ಜನ ರೈತರು ವಿರಳವಾಗಿಯಾದರೂ ಸಿಗುತ್ತಾರೆ. ಇಂಥ ಜನತೆಯ ಸಂಸ್ಕೃತಿ, ಸಂಸ್ಕಾರ ದೊಡ್ಡದು. ಅವರು ಅನ್ಯರಿಗೆ ಆದರ್ಶಪ್ರಾಯರಾಗಬೇಕೆಂಬುದೇ ಕವಿಯ ಹಾರೈಕೆ. ಅವುಗಳ ಸೇವೆ ಪವಿತ್ರ ಕಾಯಕವೆಂಬುದನ್ನು ಹೀಗೆ ಸಾರಲಾಗಿದೆ.

ಕಸವ ಬಳಿಯುವ ಕೈ ಕಸ್ತೂರಿ ನಾತವ
ಬಸವ ನಿನ್ನ ಸಗಣಿ ಬಳಿದಾರ ಕೈಗಳು
ಯಾಲಕ್ಕಿ ನಾತನಾರ್‍ಯಾವೊ

ಇಂಥ ಎತ್ತುಗಳನ್ನು ಕಣದ ಮೇಟಿಯ ಹಗ್ಗಕ್ಕೆ ಹೆಣೆ ಹೂಡಿ–ಇಂಥ ಹೂಡಿಕೆಯನ್ನು ಉತ್ತರ ಕರ್ನಾಟಕ ಪ್ರಾಂತದಲ್ಲಿ ಹಂತಿ ಹೂಡುವುದು ಎನ್ನುತ್ತಾರೆ. ಪಂಕ್ತಿ, ಪಂತಿ, ಹಂತಿ ಎಂದಾಗಿದೆ–ಜೋಳ, ರಾಗಿ, ಗೋಧಿ, ಮುಂತಾದ ಬೆಳೆಗಳ ತೆನೆಗಳನ್ನು ರೈತರು ತುಳಿಸಿ, ಕಾಳು, ಹುಲ್ಲು, ಕಸ, ಕಡ್ಡಿಗಳನ್ನು ಬೇರ್ಪಡಿಸಿ ಹಸನು ಮಾಡುತ್ತಾರೆ. ಉ. ಕ. ಪ್ರಾಂತದವರು ರಾತ್ರಿಯ ವೇಳೆ ಹಂತಿ ಬಗೆಬಗೆಯ ಹಾಡುಗಳನ್ನು ಹಾಡುತ್ತಾರೆ. (ದ. ಕ. ಪ್ರಾಂತದವರು ಆಗ ಹಾಡುವುದು ಕಡಿಮೆ; ಅವರು ಹೆಣೆ ಹೂಡುವುದು ಹಗಲಿನಲ್ಲಿ). ಹೀಗೆ ಹಾಡಲಾಗುವ ಗೀತೆಗಳಲ್ಲಿ ಬಸವಣ್ಣನನ್ನು ಕುರಿತ ಗೀತೆಗಳು ನೂರಾರು ಪ್ರಸಿದ್ಧವಾಗಿವೆ. ಅವುಗಳನ್ನು ಉ. ಕ. ಪ್ರಾಂತದಲ್ಲಿ ಸಂಗ್ರಹಿಸಿ, 'ಉ. ಕರ್ನಾಟಕದ ಹಂತಿಯ ಹಾಡುಗಳು' ಎಂಬ ಗ್ರಂಥ ರೂಪದಲ್ಲಿ ಪ್ರಕಟಿಸಿ, ಡಾ|| ಎಂ. ಎಸ್. ಲಠ್ಠೆ ಎಂಬ ವಿದ್ವಾಂಸರು ಉತ್ತಮ ಕಾರ್ಯ ಮಾಡಿದ್ದಾರೆ. ಆ ಗ್ರಂಥದಿಂದ ಆರಿಸಿಕೊಂಡ ಕೆಲವು ಗೀತೆಗಳನ್ನು ಇಲ್ಲಿ ಉದ್ಧರಿಸಲಾಗಿದೆ.

ನಾನು ಬಲ್ಲಂತೆ, ದಕ್ಷಿಣ ಪ್ರಾಂತದಲ್ಲಿ ತುಂಬ ಹೆಸರಾದ ದನಗಳ ಜಾತ್ರೆಗಳೆಂದ ಹಾಸನದ ಜಾತ್ರೆ, ಸಿದ್ಧಗಂಗಾ ಜಾತ್ರೆ, ಆದಿ ಚುಂಚನಗಿರಿ, ಜಾತ್ರೆ, ಎಡೆಯೂರು ಸಿದ್ಧಲಿಂಗೇಶ್ವರನ ಜಾತ್ರೆ, ಹೇಮಗಿರಿ ಜಾತ್ರೆ, ಕೆಂಗಲ್ ಹನುಮಂತರಾಯನ ಜಾತ್ರೆ—ಇವೇ ಮೊದಲಾದ ಜಾತ್ರೆಗಳಲ್ಲಿ ಬಹದ್ದೂರ್ ಹೋರಿಗಳ ಮಾರಾಟ, ಕೊಳ್ಳಾಟ ಪ್ರತಿ ವರ್ಷವೂ ಭರ್ಜರಿಯಾಗಿ ನಡೆಯುತ್ತದೆ. ಆ ಸಂದರ್ಭದಲ್ಲಿ ಸೇರುವ ಸಾವಿರಾರು ಜೋಡಿ ಎತ್ತುಗಳ ರೂಪ, ಆಕಾರ, ಗುಣ, ಬಣ್ಣಗಳನ್ನು ನೋಡುವುದೇ ಒಂದು ಆನಂದದಾಯಕ ಅನುಭವ. ಯಾಂತ್ರೀಕೃತ ಬೇಸಾಯ ಪದ್ಧತಿ ರೂಢಿಗೆ ಬಂದಿರುವ ಈಗಲೂ ಉತ್ತಮ ರಾಸುಗಳಿಗೆ ಅತ್ಯುತ್ತಮ ಬೆಲೆ ಇದೆ ಎಂಬುದು ನಮ್ಮ ರೈತರು ಎತ್ತುಗಳಲ್ಲಿ ಇಟ್ಟಿರುವ ಭಕ್ತಿ, ವಿಶ್ವಾಸಗಳಿಗೆ ಜ್ವಲಂತ ನಿದರ್ಶನ.

ಟಿಪ್ಪಣಿಗಳು

1. ಲಿಂಗ ಪುರಾಣದ ಪ್ರಕಾರ, ನಂದೀಶ್ವರ ಶಿಲಾದ ಮುನಿಯ ಮಗ. ಕಾಮಧೇನುವಿನ ಗರ್ಭದಲ್ಲಿ ಜನಿಸಿದವನು. ಈತನ ಪ್ರಸ್ತಾಪ ಭಾಗವತದಲ್ಲಿಯೂ ಬರುತ್ತದೆ. ನೋಡಿ, 'ಪುರಾಣನಾಮ ಚೂಡಾಮಣಿ' ಪುಟ 364-65. 'ನನ್ದೀಶ್ವರ'.

2. ಹರಿಹರನ "ಬಸವರಾಜದೇವರ ರಗಳೆ," ಭೀಮಕವಿಯ 'ಬಸವ ಪುರಾಣ' ಮುಂತಾದ ಗ್ರಂಥಗಳನ್ನು ನೋಡಬಹುದು.

3. ಜಾನಪದರು – ಜನಸಾಮಾನ್ಯರು (folks) ಈಗಲೂ ಶಿಲ್ಪಕೃತಿಗಳಾದ ಬಸವಣ್ಣಗಳು ದಿನದಿನಕ್ಕೆ ಬೆಳೆಯುತ್ತವೆ, ಎಂದು ನಂಬುತ್ತಾರೆ. ಚಾಮುಂಡಿ ಬೆಟ್ಟದ ಮೇಲಿರುವ ಬೃಹನ್ನಂದಿಯ ಬಾಯಿ ಹಿಂದೆ ಕೈಗೆಟುಕುವಷ್ಟು ಹತ್ತಿರದಲ್ಲಿದ್ದು, ಈಗ ತುಂಬ ಎತ್ತರಕ್ಕೆ ಬಸವ ಬೆಳೆದಿದೆ, ಎಂದವರನ್ನು ನಾನು ಬಲ್ಲೆ. ಆ ಜನರಲ್ಲಿ ಇಂಥ ನಂಬಿಕೆಗಳಿಗೆ ಬರವಿಲ್ಲ.

4. ನಿದರ್ಶನಕ್ಕೆ ಈ ವಾಕ್ಯವನ್ನು ಗಮನಿಸಬಹುದು: "………… the Maya and I think the French canadian and the old fashioned rural Englishman did feel that the land was an extention of himself…………"—Robert Redfield in his book 'Peasant Society and culture" p p 116. ಭೂಮಿತಾಯಿಯನ್ನು ಆ ಜನ Mother earth ಎಂದು ಭಯ ಭಕ್ತಿಯಿಂದ ಕರೆಯುವುದನ್ನು ಅಲ್ಲೇ ಪ್ರಸ್ತಾಪಿಸಲಾಗಿದೆ.

5 ನೆರೆನಾಡುಗಳ ಆಚರಣೆಯನ್ನು ಗಮನಿಸುವುದು ಅತ್ಯವಶ್ಯ.

ಕಠಿಣ ಶಬ್ದಾರ್ಥ:—ದೂದಸಮುದ್ರ-ಕ್ಷೀರಸಮುದ್ರ ಖೋಡಿಗೋ-ಕೋಡಿಗೆ, ಕೊಂಬಿಗೆ, ಅಲ್ಲ್ಯಾಳ-ಇಲ್ಲಿದ್ದಾಳೆ, ಧಟ್ಯಾಗ–ಗುಂಪಿನಲ್ಲಿ, ಪೈಲೇಕ–ಪ್ರಪ್ರಥಮವಾಗಿ, ಕಂಟಿ-ಕುರುಚಲು ಕಾಡು, ಕೊಡೆಕಲ್ಲು-ಒಂದೂರಿನ ಹೆಸರು, ಗಳಿಗಿ ಸೀರಿ-ಹೊಸಸೀರೆ, ಸಲಗರ–ಇನ್ನೊಂದೂರಿನ ಹೆಸರು. ಇಣಿ-ಹಿಣಿಲು, ಭುಜದ ಮೇಲಿನ ಉಬ್ಬು, ರಾಬ-ಕಾಯಕ, ವೃತ್ತಿ, ಚಾಜ-ಹಕ್ಕು, ಕೀರ್ತಿ. ಖುರ-ಕಾಲಿನ ಗೊರಸು, ಖಟಗ-ಕಟುಕ, ಮಿಣಿ-ಚರ್ಮದ ಹಗ್ಗ. —

ಸಸ್ಯ ಸಂರಕ್ಷಣೆ

—ಎ. ಎನ್. ಸುದರ್ಶನ್ ರಾವ್.

ಪ್ರಕೃತಿ ಪ್ರತಿಯೊಂದು ಜೀವಿಗೂ ವಿಾಸಲಾಗಿರುವ ಆಹಾರವನ್ನು ಒದಗಿಸಿವೆ. ಇದರಿಂದ ಅನಾದಿಯಿಂದಲೂ ಸ್ವೈಸರ್ಗಿಕವಾಗಿ ವಿಕಸಿಸುವಂತಹ ಸಸ್ಯಗಳಿಂದ ಹಿಡಿದು ಮನುಷ್ಯನ ಕೈವಾಡದಿಂದ ಬೆಳೆಯಲಾಗುತ್ತಿರುವ ಪೈರು ಪಚ್ಚೆಗಳವರೆಗೂ (pests and diseases) ನೆಲೆಯಾಗಿದೆ. ಅರಣ್ಯ ಸಸ್ಯಗಳ ಮೇಲೆ ಜೀವಿಸುವ ಪೀಡೆ ರೋಗಾಣುಗಳು ಕೃಷಿ ಕ್ಷೇತ್ರದಲ್ಲಿರುವ ಬೆಳೆಗಳ ಕಡೆಗೆ ಅಸಂಖ್ಯಾತವಾಗಿ ಬಂದು ಅಪಾರ ನಷ್ಟ ಮಾಡಿವೆ. ಬೇಸಾಯದಲ್ಲಿರುವ ಹಾಗೂ ಅರಣ್ಯಗಳಲ್ಲಿರುವ ಸಸ್ಯಗಳ ಮೇಲೆ ಬರುವ ಪೀಡೆ ರೋಗಾಣುಗಳು ಈ ರೀತಿಯಿವೆ. ಪೀಡೆಗಳು ಎರಡು ವರ್ಗಗಳಾಗಿ ವಿಂಗಡಿಸಲ್ಪಟ್ಟಿವೆ.

1. ಬೆನ್ನೆಲುಬು ಇಲ್ಲದ ಪ್ರಾಣಿಗಳಾದ ಅಕಶೇರುಕ ಪ್ರಾಣಿಗಳು(Invertebrates)-ಕೀಟ ನುಶಿ, ಜಂತು ಹುಳ, ಬಸವನ ಹುಳ, ನಳ್ಳಿ ಇತ್ಯಾದಿ

2. ಬೆನ್ನೆಲುಬುಳ್ಳ ಕಶೇರುಕ ಪ್ರಾಣಿಗಳು(Vertebrates) ಇಲಿ, ಹಕ್ಕಿ, ಅಳಿಲು, ಮಂಗ ನರಿ, ಹಂದಿ ಇತ್ಯಾದಿ.

ಸಸ್ಯ ರೋಗಕಾರಕವಾದ ರೋಗಾಣುಗಳು: ಇವು ಸಸ್ಯ ವರ್ಗಕ್ಕೆ ಸೇರಿವೆ,

1. ಏಕಾಣುಗಳು ಅಥವಾ ದುಂಡಾಣುಗಳು (Bacteria)

2. ಬೀಜಾಣುಗಳ ಮೂಲಕ ವೃದ್ಧಿಯಾಗುವ ಶಿಲೀಂಧ್ರ ಅಥವಾ ಬೂಷ್ಟು (Fungi)

3. ಸಜೀವ ಸ್ನಾಯುಗಳಲ್ಲಿ ಮಾತ್ರ ವೃದ್ಧಿಯಾಗುವ ಸಸಾರಜನಕ (protein) ಕಣಗಳಾದ ನಂಜು (Viruses)

4. ಹೂ ಬಿಡುವ ಸಸ್ಯ ಪರಾವಲಂಬಿಗಳು (Phanerogamic parasites)ಇವಲ್ಲದೆ, ಸಸ್ಯಗಳಿಗೆ ಶರೀರ ಕ್ರಿಯೆ ಅಥವಾ ಸನ್ನಿವೇಶಕ್ಕೆ ಸಂಬಂಧಪಟ್ಟ ನ್ಯೂನತೆಗಳಿಂದಲೂ ಅನಾರೋಗ್ಯವಾಗುವುದು.

ಕೀಟಗಳು ಹಲವಾರು ಮತ್ತು ಅವುಗಳಿಂದಾಗುವ ಹಾನಿ ವಿವಿಧ. ಕೀಟಗಳಲ್ಲಿ ಎಲೆ ತಿನ್ನುವ, ಕಾಂಡ ಕೊರೆಯುವ, ದಂಟು ಕೊರೆಯುವ, ಕುಡಿ ಕೊರೆಯುವ, ತೆನೆ ಕೊರೆಯುವ, ತೆನೆ ಹೀರುವ ಕೀಟಗಳು, ಎಲೆ ಸುರಂಗ ವಾಸಿಗಳು, ಕತ್ತರಿಸುವ ಹುಳು, ಮೊಗ್ಗು, ಕಾಯಿ, ಬೀಜ, ಕೋಶ ಕೊರೆಯುವ ಕೀಟಗಳು, ಹೆಣ್ಣು ನೊಣಗಳು ಜೀರು ಹುಳು, ಭೂ ವಾಸಿ ಕೀಟಗಳು, ಸಸ್ಯ ರೋಗಗಳನ್ನು ಹರಡುವ ಹಾಗೂ ಇತರ ಕೀಟಗಳು.

ಸಸ್ಯ ರೋಗಕಾರಿಗಳಿಂದಾಗುವ ಬೇನೆಗಳು ಅನೇಕ. ಅವು ಈ ರೀತಿಯಿವೆ. ಜೆಬ್ಬು ರೋಗಗಳು ಅಂಗಮಾರಿ, ಬೊಬ್ಬೆ, ಬೆಂಕಿ ರೋಗಗಳು ಉಬ್ಬಿದ ಗಡಸು ಚುಕ್ಕೆಗಳು, ನಾನಾ ತರಹದ ಮತ್ತು ಬಣ್ಣದ ಎಲೆ ಚುಕ್ಕೆಗಳು, ಹರಿತ ರೋಗಗಳು, ಶೀತ ರೋಗಗಳು, ತುಪ್ಪಳಿನ ರೋಗಗಳು, ಕೊಳೆ ರೋಗಗಳು, ಪಶ್ಚಮಾರಿ ರೋಗಗಳು, ಕಿರಿ ಎಲೆ, ಬೂದಿರೋಗಗಳು, ತುಕ್ಕು ರೋಗಗಳು, ಕಾಡಿಗೆ ರೋಗಗಳು, ಕಜ್ಜಿ, ಸುಡು ರೋಗಗಳು, ಮತ್ತು ಸೊರಗು ರೋಗಗಳು.

ಈ ಪೀಡೆ ರೋಗಗಳಿಂದ ಸಂರಕ್ಷಣೆಯ ವಿಧಾನಗಗಳು ಈ ರೀತಿ ಇವೆ.

1. ಯಾಂತ್ರಿಕ ಮತ್ತು ಭೌತಿಕ ವಿಧಾನಗಳು;

(Mechanical and physical methods)-ಕೀಟಗಳನ್ನು ಕೈಯಿಂದ ಹಿಡಿದು ಸಂಗ್ರಹಿಸಿ ಕೊಲ್ಲುವುದು, ಬಲೆ ಹಾಕುವುದು, ರೋಗಗ್ರಸ್ತವಾದ ಪೈರುಗಳನ್ನು, ಸಸ್ಯಭಾಗಗಳನ್ನು ಕಿತ್ತು ಸುಡುವುದು; ಬೆಳೆ ಶೇಷಗಳಿಗೆ ಬೆಂಕಿ ಹಾಕುವದು ಇತ್ಯಾದಿ.

2. ಕಾನೂನು ಮತ್ತು ನಿರ್ಬಂಧದ ಕ್ರಮಗಳು

(Legislative & Quarantine regulations) ಪೀಡೆ ಹಾಗೂ ರೋಗಗ್ರಸ್ತವಾದ ಬೀಜ ಮತ್ತು ಬೆಳೆ ಸಾಮಗ್ರಿಗಳನ್ನು ತರುವುದಾಗಲೀ, ಕಳಿಸುವುದಾಗಲೀ, ಮತ್ತು ಮಾರುವುದನ್ನು ಕಾನೂನುಗಳು, ಶಾಸನಗಳು, ಹಾಗೂ ನಿರ್ಬಂಧದ ಆಜ್ಞೆಗಳ ಮೂಲಕ ಹತೋಟಿಗೆ ತರಬಹುದು.

3 ಬೇಸಾಯ ರೀತ್ಯ ಕ್ರಮಗಳು (Cultivational practices)

ಮಣ್ಣು, ಬೀಜ ಮತ್ತು ಉಪಕರಣಗಳ ಶುದ್ಧತೆ, ಬೇಸಾಯ ಪದ್ಧತಿಗಳನ್ನು ಸೂಕ್ತವಾಗಿ ಬದಲಾಯಿಸುವಿಕೆ, ಆಳದ ಉಳುಮೆ, ಶೀಘ್ರ ಅಥವ ತಡವಾಗಿ ಬಿತ್ತನೆ ಮಾಡುವುದು, ಬೆಳೆಗಳ ಪರ್ಯಾಯ, ಮಿಶ್ರ ಬೆಳೆ ಮತ್ತು ಮಣ್ಣಿನ ತಿದ್ದುಪಡಿ ಇತ್ಯಾದಿಗಳಿಂದ.

4. ರಾಸಾಯನಿಕ ಕ್ರಮಗಳು (Chemical methods)

ಬೀಜ ಮತ್ತು ಬಿತ್ತನೆ ಭಾಗಗಳಿಗೂ ಮಣ್ಣಿಗೂ ಮತ್ತು ಪೈರಿಗೂ ಒಣಪುಡಿ, ಹರಳು ಕಣಕ, ದ್ರಾವಣ ಮತ್ತು ವಿಷ ವಾಯುಗಳ ರೂಪದಲ್ಲಿ ಸಂಸ್ಕರಣ ಅಥವಾ ಸಿಂಪರಣೆ ಮಾಡುವುದರಿಂದ.

5. ಜೀವ ಶತೃಗಳ ಮೂಲಕ ನಿವಾರಣೆ. (Biological control & Antibiosis)

ಪೀಡೆಯ ಮತ್ತು ರೋಗಾಣುಗಳ ಸ್ವಾಭಾವಿಕ ಶತ್ರುಗಳನ್ನು ಹರಡುವುದು ಮತ್ತು ಸೂಕ್ಷ್ಮಾಣುನಾಶಗಳನ್ನು ಬಳಸುವುದರಿಂದ.

6. ಪೀಡೆ ಅಥವಾ ರೋಗ ನಿರೋಧಶಕ್ತಿಯುಳ್ಳ ತಳಿಗಳನ್ನು ಬಳಸುವುದರಿಂದ. (Use of resistant varieties).

—

ಡಾ॥ ಕೋಪರ್ ನಿಕಸ್

(10 ನೇ ಪುಟದಿಂದ)

ಪುಸ್ತಕ ಮುದ್ರಣಾಲಯ ಸೇರಿತು.

ದೇಶ ಇವರನ್ನು ಬಹಳ ದಿನ ಉಳಿಸಿಕೊಳ್ಳಲಾಗಲಿಲ್ಲ. 1543 ಮೇ 24 ರಂದು ಫ್ರಂಬರ್ಗನಲ್ಲಿ ಕೋಪರ್ನಿಕಸ್ ತಮ್ಮ ಕೊನೆಯುಸಿರು ಎಳೆದರು. ಇವರ ಆತ್ಮೀಯ ಮಿತ್ರ ಟ್ರೀಡ್‌ಮನ್‌ಗ್ರೀಸ್‌ರವರು ರಿಟಿಕ್‌ಗೆ ಬರೆದ ಒಂದು ಪತ್ರದಲ್ಲಿ ಕೊಪರ್ನಿಕಸ್ ಸತ್ತ ಬಗೆಯನ್ನು ಹೀಗೆ ಹೇಳಿದ್ದಾರೆ. "ಯಾವ ಪೂರ್ವ ಸೂಚನೆಯೂ ಇಲ್ಲದೆ ಕೋಪರ್ನಿಕಸ್ ಹಠಾತ್ ಹಾಸಿಗೆ ಹಿಡಿದು ಮಲಗಿದರು; ಅವರ ತೆರೆದ ಬಾಯಿಂದ ಉಕ್ಕಿ ಬರುತ್ತಿದ್ದ ರಕ್ತ ಸತತ ಕೆಳಗೆ ಹರಿಯುತಿತ್ತು. ಇದರ ನಂತರ ಇವರ ಬಲಗೈ ಲಕ್ವಾದಿಂದ ಜರ್ಜರಿತವಾಗಿತ್ತು. ತಕ್ಷಣ ಮರಣವನ್ನಪ್ಪಿದರು; ವೈದ್ಯನಿಗೆ ವೈದಕೀಯ ಉಪಚಾರವಿಲ್ಲದೆ ಹೋಯಿತು."

ಕೊಪರ್ನಿಕಸ್‌ರ ಮರಣದ ದಿನವೇ ಅವರ ಗ್ರಂಥ 'ಡಿರೆವೆಲ್ಯೂಷನಿಬಸ್ ಆರ್ಬಿಯಂ'ದ ಸುಂದರವಾಗಿಮುದ್ರಣ ಗೊಂಡ ಒಂದು ಪ್ರತಿ ಅಂಚೆ ಮೂಲಕ ಅವರ ವಿಳಾಸಕ್ಕೆ ಬಂದಿತು. ಅದನ್ನು ನೋಡಲೆಂದೇ ಸಾವನ್ನು ತಡೆದು, ಅದು ಬಂದು ಇವರ ಕೈ ಸೇರಿದ ಮೇಲೆಯೇ ಒಂದು ಕ್ಷಣ ಗ್ರಂಥವನ್ನು ನೋಡಿ ಕೊನೆಯಬಾರಿಗೆ ಕಣ್ಣು ಮುಚ್ಚಿದರು. ಮೈಚಾಚಿ ಮಲಗಿದ ದೇಹ ಪೂರ್ಣ ಸಂತೃಪ್ತಿಯನ್ನು ಸೂಚಿಸುತ್ತಿತ್ತು. ಇದೊಂದು ತೀರಾ ಅದ್ಭುತವಾದ ಸನ್ನಿವೇಶ ಇಂತಹ ಸಾವು ಹಿರಿಯ ಜೀವಿಗಳಿಗೆ ಮಾತ್ರ ಸಾಧ್ಯ. ವ್ಯಕ್ತಿಗೆ ಮರಣ ಸಂಭವಿಸಿದ್ದರೂ ವ್ಯಕ್ತಿಯ ಸಾಧನೆಯ ಕುರುಹಾದ ಆ ಗ್ರಂಥ ಇಂದಿಗೂ ಅಮರತ್ವ ಪಡೆದಿದೆ. ಇದಕ್ಕಾಗಿ ಇವರು ಮರೆಯಲಾಗದ ಮಹಾನುಭಾವರಾಗಿ ಉಳಿದಿದ್ದಾರೆ. —

(ದಿನಾಂಕ 29.9.76 ರಿಂದ
29.10.76ರ ವರೆಗೆ)

ಮಾಸ ಭವಿಷ್ಯ

ಜ್ಯೋತಿಷ್ಯ ವಿದ್ವಾನ್
— ಎನ್. ವಿ. ಚನ್ನವೀರಶಾಸ್ತ್ರಿ.

ಮೇಷ

೨ನೇ ಗುರು- ಹಣದುಬ್ಬರ, ಕುಟುಂಬ ಚಿಂತೆ, ೪ನೇ ಶನಿ-ಪ್ರಯಾಣ, ಕೃಷಿ ವೃದ್ಧಿ, ವ್ಯಾಪಾರವ್ಯಾಸಂಗ ಉತ್ತಮ, ದೂರದ ವಾರ್ತೆ

ವೃಷಭ

೧ನೇ ಗುರು-ಅನಾರೋಗ್ಯ, ಸ್ತ್ರೀ ದ್ವೇಷ, ಅಧಿಕ ಖರ್ಚು, ಕಾರ್ಯವಿಳಂಬ, ವಾದದಲ್ಲಿ ಸೋಲು. ೩ನೇ ಶನಿ-ಕಾರ್ಯಾನುಕೂಲ, ವ್ಯಾಪಾರವೃದ್ಧಿ, ಸರ್ಕಾರಿ ವ್ಯವಹಾರ, ಉದ್ಯೋಗವೃದ್ಧಿ

ಮಿಥುನ

೧೨ನೇ ಗುರು-ಋಣಭಾದೆ, ಕಾರ್ಯದಚಣೆ, ಆರ್ಥಿಕಮುಗ್ಗಟ್ಟು, ಸ್ವಜನ ವಿರೋಧ. ೨ನೇ ಶನಿ-ಗೃಹದಲ್ಲಿ ಕಳವಿನ ಸಂಭವ, ಮಾರ್ಗಾಯಾಸ, ಮಾತೃಚಿಂತೆ, ವ್ಯರ್ಥ ಪ್ರಯಾಣ.

ಕರ್ಕ

೧೧ನೇ ಗುರು-ಉದ್ಯೋಗವೃದ್ಧಿ, ಧನಸಂಗ್ರಹ, ಉತ್ತಮರ ಸಹವಾಸ, ಕರೆಯು ಪತ್ರ, ೧ನೇ ಶನಿ-ಅನಾರೋಗ್ಯ, ಆಕಸ್ಮಿಕ ಘಟನೆ, ಬುದ್ಧಿಚಾಂಚಲ್ಯ ಅಕಾಲ ಭೋಜನ, ಅತೃಪ್ತಿ.

ಸಿಂಹ

೧೦ನೇ ಗುರು-ರಾಜಕೀಯ ವ್ಯವಹಾರ, ಪ್ರಯತ್ನ ಮೂಲಕ ಕಾರ್ಯ ಸಿದ್ಧಿ, ಮಾತಿನ ನಿಷ್ಕರ್ಷೆ, ೧೨ನೇ ಶನಿ-ಅಪಾದನೆ, ಜಾಮೀನು, ಹಣದುಬ್ಬರ, ಅಧಿಕಾರಿಗಳ ಸಿಟ್ಟು, ಉತ್ಪಾದನೆಗೆ ಅಡ್ಡಿ.

ಕನ್ಯಾ

೯ನೇ ಗುರು-ಧರ್ಮ ಕಾರ್ಯ, ಭಕ್ತಿ, ಧಣಿ ಮೆಚ್ಚಿಗೆ, ಕಾರ್ಯಾನುಕೂಲ, ವ್ಯಾಸಂಗ ಉತ್ತಮ. ೧೧ನೇ ಶನಿ-ಬೇಸಾಯವೃದ್ಧಿ, ಕ್ರಯವಿಕ್ರಯ, ಆರ್ಥಿಕವೃದ್ಧಿ, ವ್ಯಾಪಾರ ವೃದ್ಧಿ, ಸುಖ.

ತುಲಾ

೮ನೇ ಗುರು-ದೇಹ ಬಾಧೆ, ಅಧಿಕ ಖರ್ಚು, ಕುಟುಂಬ ಚಿಂತೆ, ಸೋಲು, ಪ್ರಯತ್ನ ವಿಘ್ನ. ೧೦ನೇ ಶನಿ-ಕಾರ್ಯಾನುಕೂಲ, ಸಂಚಾರ, ಶಿಫಾರಸು, ಧಣಿಗಳ ಮೆಚ್ಚಿಗೆ.

ವೃಶ್ಚಿಕ

೭ನೇ ಗುರು-ಶುಭವಾರ್ತೆ, ಆಹ್ವಾನ, ಮಿತ್ರ ಪ್ರೇಮ ಸ್ತ್ರೀ ವಿಚಾರ, ಸತ್ಸಂಗ. ೯ನೇ ಶನಿ-ಪಿತೃ ಚಿಂತೆ, ಪ್ರಯತ್ನ ಭಂಗ, ಸತ್ಕಾರ್ಯ ವಿಘ್ನ, ವ್ಯಾಪಾರ, ವ್ಯಾಸಂಗ ಮಧ್ಯಮ.

ಧನಸ್ಸು

೬ನೇ ಗುರು-ವಿಶೇಷ ಭೋಜನ, ಶತ್ರು ಜಯ, ವ್ಯಾಸಂಗ ಉತ್ತಮ, ದಣಿಗಳ ಕೋಪ, ೮ನೇ ಶನಿ-ಅಪಘಾತ ಪ್ರಯಾಣಕ್ಕೆ ಅಡ್ಡಿ, ಉದ್ಯೋಗಕ್ಕೆ ಆತಂಕ, ಹಣದುಬ್ಬರ,

ಮಕರ

೫ನೇ ಗುರು-ಮೂಲಧನ, ಬುದ್ಧಿವಂತಿಕೆ, ಗುರು ಹಿರಿಯರಲ್ಲಿ ಭಕ್ತಿ, ಸ್ವಪ್ರಯತ್ನ ಜಯ, ೭ನೇ ಶನಿ-ಸ್ತ್ರೀ ಪುತ್ರರಿಗೆ ಕಾಟ, ಕುಟುಂಬದಲ್ಲಿ ಘರ್ಷಣೆ, ಆಪ್ತರಲ್ಲಿ ಅತೃಪ್ತಿ

ಕುಂಭ

೪ನೇ ಗುರು-ಕುಟುಂಬ ಸುಖ, ದಣಿಗಳ ಮೆಚ್ಚಿಗೆ ವ್ಯಾಸಂಗ ವ್ಯಾಪಾರ ವ್ಯವಸಾಯ ಉತ್ತಮ. ೬ನೇ ಶನಿ-ಕೃಷಿವೃದ್ಧಿ, ಪ್ರತಿಭೆ, ಕೀರ್ತಿ, ಅಧಿಕಾರಿಗಳ ಭೇಟಿ, ಧನಾಗಮ, ಕಾರ್ಯಜಯ.

ಮೀನ

೩ನೇ ಗುರು-ಅಪಾಯಕರ, ಆರ್ಥಿಕ ಚಿಂತೆ, ವ್ಯರ್ಥ ಪ್ರಯಾಣ, ಅಧಿಕ ಖರ್ಚು, ೫ನೇ ಶನಿ-ಬುದ್ಧಿ ವಿಕಾರ, ಅಪಾದನೆ, ಪಿತ್ರಾರ್ಜಿತ ವ್ಯವಹಾರ, ಬರುವ ಹಣಕ್ಕೆ ಅಡ್ಡಿ.

ಕನ್ನಡ ಸೂಕ್ತಿ ಸಂಹಿತೆ

ಭಾವನೆಯಂತೆ ಸಿದ್ಧಿ
ನಮ್ಮ ಭಾವನೆ ಯಾವ ರೀತಿಯೊ
ಸಿದ್ಧಿಯೋ ಅದರಂತೆಯೆ

‘ಸಿದ್ಧಗಂಗಾ’

“ಪತ್ರಿಕೆ ಚಿರಾಯುವಾಗಲೆಂದು ಹರಸಿ ಹಾರೈಸಿರುವ ಆಜೀವ ಸದಸ್ಯರ ಬಳಗ”

(ಮುಂದುವರೆದ ಪಟ್ಟಿ)

209 ಶ್ರೀಶ್ರೀ ನಾಗನೂರುಸ್ವಾಮಿಗಳವರ ವಿದಾರ್ಥಿಯರ ಉಚಿತ ವಿದ್ಯಾರ್ಥಿನಿಲಯ, ಬೆಳಗಾಂ

210 ಶ್ರೀ ಎಸ್. ತೋಟಪ್ಪ, ಮರ್ಚೆಂಟ್, ಹಾನಬಾಳ್, ಹಾಸನಜಿಲ್ಲೆ

211 ಶ್ರೀಮತಿ ಬಿ. ಗೌರಮ್ಮ, ಪ್ಲಾಂಟರ್, ಸಕಲೇಶಪುರ

212 ಶ್ರೀ ಜೆ.ಪಿ. ವಿಜಯಕುಮಾರ್ S/o ಪುಟ್ಟಯ್ಯ, ಜಂಗಮಕೋಟೆ, ಕೋಲಾರ ಜಿಲ್ಲೆ

213 ಶ್ರೀ ಪಿ ಮುನಿಯಪ್ಪ S/o ಪುಟ್ಟಯ್ಯ, ಬಿದಲೂರು, ದೇವನಹಳ್ಳಿ ತಾ॥ ಬೆಂಗಳೂರುಜಿಲ್ಲೆ

214 ಶ್ರೀ ವಿ.ಎಸ್. ಗವಿಯಪ್ಪ, ಮರ್ಚೆಂಟ್, ವಿಜಯಪುರ, ಬೆಂಗಳೂರು ಜಿಲ್ಲೆ

215 ಆರ್.ಎಂ. ನೀಲಕಂಠಯ್ಯ, ಮುಖ್ಯೋಪಾಧ್ಯಾಯರು ಶ್ರೀ ಸಿದ್ಧಗಂಗಾ ರೂರಲ್ ಹೈಸ್ಕೂಲ್ ಬೂದಿಗೆರೆ, ಬೆಂಗಳೂರುಜಿಲ್ಲೆ

216 ಶ್ರೀ ಎನ್. ಶಿವರಾಮ ಐಯ್ಯರ್, ಬೂದಿಗೆರೆ, ಬೆಂಗಳೂರು ಜಿಲ್ಲೆ

217 ಶ್ರೀ ಎಂ.ಎಸ್. ಗುರುಸಿದ್ದಯ್ಯ ಬೆಂಗಳೂರು-27

218 ಶ್ರೀ ಸಿದ್ಧಗಂಗಪ್ಪ, ಶಿಕ್ಷಕರು, ಸಾಕ್ಷಿಹಳ್ಳಿ, ಸಿರಾ ತಾ॥ ತುಮಕೂರು ಜಿಲ್ಲೆ

219 ಶ್ರೀ ಹೆಚ್.ಎಸ್. ಬಲವಂತಪ್ಪ, ಪ್ಲಾಂಟರ್, ಹಾಲಸುಲಗಿ, ಸಕಲೇಶಪುರ ತಾ॥

220 ಶ್ರೀ ಎಂ. ಮರಿದೇವರು, ರಾಜಾಜಿನಗರ ಬೆಂಗಳೂರೂರು-10

221 ಶ್ರೀ ಆರ್. ವೀರಭದ್ರಪ್ಪ, ಚಾಮರಾಜಪೇಟೆ ಬೆಂಗಳೂರ-18

222 ಶ್ರೀ ಪಿ.ಬಿ. ಮೃತ್ಯುಂಜಯ, ಕಾರವಾರ್(N.K.)

223 ಶ್ರೀ ಹೆಚ್. ಎಂ. ಪ್ರಭುಸ್ವಾಮಿ, ಪ್ರೊ॥ ಮಂಜುನಾಥ ಮೋಟಾರ್ ಸರ್ವೀಸ್ ನಂಜನಗೂಡು

224 ಶ್ರೀ ಚನ್ನಬಸವದೇವರು, ಮೈಸೂರು-8

225 ಶ್ರೀ ಕೆ.ಎಂ. ದೊಡ್ಡಮಾದಪ್ಪ, ಮೈಸೂರು-1

226 ಶ್ರೀ ಜಿ.ವಿ. ತಮ್ಮಯ್ಯ, ಶಿವಮೊಗ್ಗ

227 ಶ್ರೀ ಎನ್. ಶಿವಣ್ಣ, ವೀರನಗೆರೆ, ಮೈಸೂರು-1

228 ಶ್ರೀ ಕೆ.ಟಿ. ಪಾಲಾಕ್ಷ, ರಾಮಾನುಜ ರೋಡ್, ಮೈಸೂರು

(ಮುಂದುವರಿಯುವುದು)

'SIDDAGANGA' Monthly, Sree Siddaganga Mutt. KRN Q-9.
Registered with the Registrar of News papers for India under No. 17139/69

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಮುದ್ರಣಾಲಯ,